BRUHAT BANGALORE MAHANAGARA PALIKE

No: SE/TVCC/GL/1/08-09

Office of the Superintending Engineer
Technical & Vigilance Cell,
N.R. Square, B.B.M.P.
Bangalore. Dated 14/8/2008.

To,
The Executive Engineer (Electrical)
West Division, BESCOM,
3rd Floor, Crescent Towers,
Crescent Road, Bangalore-01,

Sub:- Issue of safety certificate in respect of the building at #9, Binny stone Garden, at Ward no-29, Bangalore-Reg.

Ref:-. y.o. Ltr No. EEE/WD/AEE(O)/M(T)/2742-43
Dated: 08.08.2008.

Under Reference above it has been requested to issue safety certificate in respect of the building at No- at #9, Binny stone Garden, at Ward no-29, Bangalore.

The spot has been inspected along with the EE (West-TVCC), AE (ward no-29). During the inspection it was observed that construction activities at different stages in various blocks are under progress.

An old existing Bungalow located at Northern side and a structure in set back area on eastern side constructed is being used as site office are to be demolished before seeking ***"occupancy certificate"*** for the said building.

During the inspection the set backs of the building are checked with the sanctioned plan and found on par with the sanctioned plan.

In due course Executive Engineer is requested to forward letter seeking safety certificate for the building which are ***completed*** and not for the building which are ***under progress***.

The construction activities are under progress and occupancy certificate is not issued to the said building. On the ground that, the constructions of the building is not completed and set backs areas are still in blockage stage, more over fire force clearance are not obtained from the competent authority as ascertained from the representative of M/S ETA Karnataka Estate Ltd, hence power supply to the said building cannot be considered at this stage.

WEST DIVISION
BESCOM
No.....
Date.....
A.E.E. (Ele) (Off)
A.O. (F & C) 16-08-08
A.O. (J/A)
E.E. (Ele)

Enclosure:
Copies of sanctioned plan (31 Nos)

S. Prashanth 14/8/08
Superintending Engineer
TVCC

Copy Submitted To commissioner for kind information

31 plans

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆಃ ಅಅ/ಟಿ.ವಿ.ಸಿ.ಸಿ./ಜಿಎಲ್//12/08–09

ಅಧೀಕ್ಷಕ ಅಭಿಯಂತರರ ಕಛೇರಿ,
ತಾಂತ್ರಿಕ ಹಾಗೂ ಜಾಗೃತಾ ಕೋಶ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು. ದಿನಾಂಕಃ 20/08/2008.

ರವರಿಗೆ,
ಕಾರ್ಯನಿರ್ವಾಹಕ ಇಂಜಿನಿಯರ್ (ವಿ),
(ವಾ. ಕಾ ಮತ್ತು ಪ) ರವರ ಕಛೇರಿ
ಉತ್ತರ ವಿಭಾಗ, ಬೆ.ವಿ.ಕಂ.,
ರಾಜಾಜಿನಗರ ಬೆಂಗಳೂರು–10.

ವಿಷಯ: ವಾರ್ಡ್ ಸಂಖ್ಯೆ–21ರ ಮಾಗಡಿ ಮುಖ್ಯರಸ್ತೆಯ ಅಗ್ರಹಾರ ದಾಸರಹಳ್ಳಿಯ ಸ್ವತ್ತಿನ ಸಂಖ್ಯೆ–77 (ಹಳೆಯ ಸಂಖ್ಯೆ–63) ರಲ್ಲಿನ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ನೀಡುವ ಬಗ್ಗೆ.

ಉಲ್ಲೇಖ: (1) ಸಂ–ಕಾನಿಇಂ(ವಿ)/ಉವಿ/ಸಕಾಇಂ(ಕ)/ಕಿ.ಇಂ–1/3422–24 ದಿನಾಂಕ: 14/8/2008.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ಸ್ವತ್ತಿನ ಸಂಖ್ಯೆ–77 (ಹಳೆಯ ಸಂಖ್ಯೆ–63) ರಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ಕಲ್ಪಿಸುವ ಸಲುವಾಗಿ ಸಲ್ಲಿಸಿರುವ ನೀಲಿ ನಕ್ಷೆಯ ಮಂಜೂರಾತಿಯ ಬಗ್ಗೆ ಪರಿಶೀಲಿಸಿ ಧೃಡೀಕರಿಸಬೇಕಾಗಿ ಕೋರಿರುತ್ತೀರಿ.

ಸದರಿ ಸ್ವತ್ತಿನಲ್ಲಿ ನೆಲ ಮತ್ತು ಮೊದಲನೇಯ ಅಂತಸ್ತುಳ್ಳ ವಸತಿ ಕಟ್ಟಡವನ್ನು ನಿರ್ಮಿಸಲು ಪಾಲಿಕೆಯ ಶ್ರೀರಾಮಮಂದಿರ ಉಪವಿಭಾಗದ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು ರವರು ದಿನಾಂಕ: 24/4/2004 ರಂದು ನಕ್ಷೆ ಮಂಜೂರಾತಿಯನ್ನು ನೀಡಿರುತ್ತಾರೆ.

ಸದರಿ ಸ್ವತ್ತಿನಲ್ಲಿನ ಕಟ್ಟಡವನ್ನು ದಿನಾಂಕ: 20/8/2008 ರಂದು ಈ ವಿಭಾಗದ ಕಾರ್ಯಪಾಲಕ ಇಂಜಿನಿಯರ್ (ಟಿ.ವಿ.ಸಿ.ಸಿ.–ಪಶ್ಚಿಮ) ರವರು ಪರಿವೀಕ್ಷಿಸಿರುತ್ತಾರೆ. ಕಟ್ಟಡ ನಿರ್ಮಾಣವು ಪೂರ್ಣಗೊಂಡಿದ್ದು, ಯಾವುದೇ ನಿರ್ಮಾಣ ಕಾರ್ಯವು ಪ್ರಗತಿಯಲ್ಲಿರುವುದಿಲ್ಲವೆಂದು. ಹಾಲಿ ನೆಲ ಮತ್ತು ಮೊದಲನೇ ಅಂತಸ್ತಿನ ಕಟ್ಟಡವನ್ನು ನಿರ್ಮಿಸಿ ವಾಣಿಜ್ಯ ಉಪಯೋಗಕ್ಕೆ ಬಳಸಲಾಗುತ್ತಿದೆ ಎಂದು ಹಾಗೂ ನಡುಜಾಗಗಳನ್ನು ಮಂಜೂರಾತಿ ನಕ್ಷೆಯೊಂದಿಗೆ ಹೋಲಿಸಿದಾಗ ಬೈಲಾ ಉಲ್ಲಂಘನೆಯಾಗಿರುವುದಾಗಿ ವರದಿ ಮಾಡಿರುತ್ತಾರೆ.

ಹೊಸ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಒದಗಿಸುವ ಮೊದಲು ಕಟ್ಟಡ ನಿರ್ಮಾಣದ ಬಗ್ಗೆ ಪಾಲಿಕೆಯ ನೋಡೆಲ್ ಅಧಿಕಾರಿಯವರ ಅಭಿಪ್ರಾಯ ಪಡೆದು ವಿದ್ಯುತ್ ಸಂಪರ್ಕ ನೀಡುವ ಬಗ್ಗೆ ಕ್ರಮ ಕೈಗೊಳ್ಳಬೇಕಿರುತ್ತದೆ. ಆದರೆ ಈ ಕಟ್ಟಡಕ್ಕೆ ಈಗಾಗಲೇ ವಿದ್ಯುತ್ ಸಂಪರ್ಕ ಕಲ್ಪಿಸಿರುವುದನ್ನು ಕಾರ್ಯಪಾಲಕ ಇಂಜಿನಿಯರ್‌ರವರು ತಪಾಸಣೆ ಸಮಯದಲ್ಲಿ ಗಮನಿಸಿರುತ್ತಾರೆ.

ಕಟ್ಟಡವನ್ನು ಮಂಜೂರಾತಿ ನಕ್ಷೆಗೆ ವಿರುದ್ಧವಾಗಿ ನಿರ್ಮಾಣ ಮಾಡಿರುವುದರಿಂದ ವಿದ್ಯುತ್ ಸಂಪರ್ಕ ನೀಡದಂತೆ ಕ್ರಮ ವಹಿಸಲು ತಿಳಿಸಿದೆ.

20/8/08
ಅಧೀಕ್ಷಕ ಅಭಿಯಂತರರು
ತಾಂತ್ರಿಕ ಹಾಗೂ ಜಾಗೃತ ಕೋಶ

1) ಪ್ರತಿಯನ್ನು ಮಾನ್ಯ ಆಯುಕ್ತರು ರವರ ಅವಗಾಹನೆಗಾಗಿ ಸಲ್ಲಿಸಿದೆ.

2) ಪ್ರತಿಯನ್ನು ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ಶ್ರೀರಾಮಮಂದಿರ) ರವರಿಗೆ ಕಳುಹಿಸುತ್ತಾ ಕಟ್ಟಡದ ವ್ಯತಿರಿಕ್ತ ಭಾಗಗಳನ್ನು ತೆರವುಗೊಳಿಸಲು ಹಾಗೂ ತೆಗೆದುಕೊಂಡ ಕ್ರಮದ ಬಗ್ಗೆ ಈ ಕಛೇರಿಗೆ ವರದಿ ಸಲ್ಲಿಸಲು ಸೂಚಿಸಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆಃ ಅಅ/ಟಿ.ವಿ.ಸಿ.ಸಿ./ಜಿಎಲ್/15 /08–09

ಅಧೀಕ್ಷಕ ಅಭಿಯಂತರರ ಕಛೇರಿ,
ತಾಂತ್ರಿಕ ಹಾಗೂ ಜಾಗೃತಾ ಕೋಶ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು. ದಿನಾಂಕಃ 21/08/2008.

ರವರಿಗೆ,
ಕಾರ್ಯನಿರ್ವಾಹಕ ಇಂಜಿನಿಯರ್ (ವಿ),
ಪಶ್ಚಿಮ ವಿಭಾಗ, ಬೆಸ್ಕಾಂ, 3ನೇ ಮಹಡಿ, ಕ್ರೆಸೆಂಟ್ ಟವರ್,
ಕ್ರೆಸೆಂಟ್ ರಸ್ತೆ
ಬೆಂಗಳೂರು–01.

ವಿಷಯ: ವಾರ್ಡ್ ಸಂಖ್ಯೆ–28ರ ನಗರ್ತ್‌ಪೇಟೆ ಕ್ರಾಸ್, ಮಕಲ್ಲಪ್ಪ ಲೇನ್‌ನ ಸ್ವತ್ತಿನ ಸಂಖ್ಯೆ–2 ರಲ್ಲಿನ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ನೀಡುವ ಬಗ್ಗೆ.

ಉಲ್ಲೇಖ: No. EEE/WD/AEE(O)/M(T) 2901–902 ದಿನಾಂಕ: 14/8/2008.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ಸ್ವತ್ತಿನ ಸಂಖ್ಯೆ–2 ರಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ಕಲ್ಪಿಸುವ ಸಲುವಾಗಿ ಸಲ್ಲಿಸಿರುವ ನೀಲಿ ನಕ್ಷೆಯ ಮಂಜೂರಾತಿಯ ಬಗ್ಗೆ ಪರಿಶೀಲಿಸಿ ಧೃಡೀಕರಿಸಬೇಕಾಗಿ ಕೋರಿರುತ್ತೀರಿ. ದಿನಾಂಕ: 20/8/2008 ರಂದು ಉಲ್ಲೇಖಿತ ಪತ್ರವನ್ನು ಈ ಕಛೇರಿಗೆ ಸಲ್ಲಿಸಲಾಗಿರುತ್ತದೆ.

ಸದರಿ ಸ್ವತ್ತಿನಲ್ಲಿ ಸ್ಟಿಲ್ಟ್, ನೆಲ ಮತ್ತು ಎರಡು ಮೇಲು ಅಂತಸ್ತುಳ್ಳ ವಾಣಿಜ್ಯ ಕಟ್ಟಡವನ್ನು ನಿರ್ಮಿಸಲು ಪಾಲಿಕೆಯ ಸಹಾಯಕ ನಿರ್ದೇಶಕರು ನಗರಯೋಜನೆ (ಪಶ್ಚಿಮ) ರವರು ದಿನಾಂಕ: 8/5/2007 (ಎಲ್.ಪಿ. ಸಂಖ್ಯೆ–ಜಂಟಿ ಆಯುಕ್ತರು(ಪಶ್ಚಿಮ)/28/07–08) ರಂದು ನಕ್ಷೆ ಮಂಜೂರಾತಿಯನ್ನು ನೀಡಿರುತ್ತಾರೆ.

ಸದರಿ ಸ್ವತ್ತಿನಲ್ಲಿನ ಕಟ್ಟಡವನ್ನು ದಿನಾಂಕ: 21/8/2008 ರಂದು ಈ ವಿಭಾಗದ ಕಾರ್ಯಪಾಲಕ ಇಂಜಿನಿಯರ್ (ಟಿ.ವಿ.ಸಿ.ಸಿ.–ಪಶ್ಚಿಮ) ರವರು ಪರಿವೀಕ್ಷಿಸಿರುತ್ತಾರೆ. ಪರಿವೀಕ್ಷಣೆಯ ಸಮಯದಲ್ಲಿ ಕಟ್ಟಡಕ್ಕೆ ಬಣ್ಣ ಬಳಿಯುವ ಕಾರ್ಯವು ಪ್ರಗತಿಯಲ್ಲಿರುವುದಾಗಿ, ಹಾಲಿ ಸ್ಟಿಲ್ಟ್, ನೆಲ ಮತ್ತು 5 ಮೇಲು ಅಂತಸ್ತುಳ್ಳ ಕಟ್ಟಡವನ್ನು ನಿರ್ಮಿಸಿರುವುದಾಗಿ ಹಾಗೂ ನಡುಜಾಗಗಳನ್ನು ಮಂಜೂರಾತಿ ನಕ್ಷೆಯೊಂದಿಗೆ ಹೋಲಿಸಿದಾಗ ಬೈಲಾ ಉಲ್ಲಂಘನೆಯಾಗಿರುವುದಾಗಿ ವರದಿ ಮಾಡಿರುತ್ತಾರೆ.

ಕಟ್ಟಡವನ್ನು ಮಂಜೂರಾತಿ ನಕ್ಷೆಗೆ ವಿರುದ್ಧವಾಗಿ ನಿರ್ಮಾಣ ಮಾಡಿರುವುದರಿಂದ ಹಾಗೂ ಮೂರು ಅಂತಸ್ತುಗಳನ್ನು (ಮೂರನೇ, ನಾಲ್ಕನೇ ಹಾಗೂ ಐದು ಅಂತಸ್ತು) ಅನಧಿಕೃತವಾಗಿ ನಿರ್ಮಾಣ ಮಾಡಿರುವುದರಿಂದ ವಿದ್ಯುತ್ ಸಂಪರ್ಕ ನೀಡದಂತೆ ಕ್ರಮ ಜರಿಸಲು ತಿಳಿಸಿದೆ.

ಅಧೀಕ್ಷಕ ಅಭಿಯಂತರರು 21/8/08
ತಾಂತ್ರಿಕ ಹಾಗೂ ಜಾಗೃತ ಕೋಶ

O/C (M.F)

WEST DIVISION
BESCOM
No.
Date
A.E.E. (Ele) 22-08-08
A.O. (F & C)
A.O. (I/A)
E.E. (Ele)

1) ಪ್ರತಿಯನ್ನು ಮಾನ್ಯ ಆಯುಕ್ತರು ರವರ ಅವಗಾಹನೆಗಾಗಿ ಸಲ್ಲಿಸಿದೆ.

2) ಪ್ರತಿಯನ್ನು ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ಚಿಕ್ಕಪೇಟೆ) ರವರಿಗೆ ಕಳುಹಿಸುತ್ತಾ ಸದರಿ ಕಟ್ಟಡದಲ್ಲಿನ ಅನಧಿಕೃತ ನಿರ್ಮಾಣ/ಕಟ್ಟಡದ ಉಪವಿಧಿಗಳಿಗೆ ವ್ಯತಿರಿಕ್ತವಾಗಿ ನಿರ್ಮಿಸಿರುವ ಭಾಗಗಳನ್ನು ತೆರವುಗೊಳಿಸಲು ಕೆ.ಎಂ.ಸಿ. ಕಾಯ್ದೆ 1976 ಅನ್ವಯ ತೆಗೆದುಕೊಂಡ ಕ್ರಮಗಳ ಬಗೆಗಿನ ದಾಖಲೆಗಳನ್ನು ವಿವರವಾದ ವರದಿಯೊಂದಿಗೆ ಸಲ್ಲಿಸಲು ಸೂಚಿಸಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

4

ಸಂಖ್ಯೆಃ ಅಅ/ಟಿ.ವಿ.ಸಿ.ಸಿ./ಜಿಎಲ್/24/08–09

ಅಧೀಕ್ಷಕ ಅಭಿಯಂತರರ ಕಛೇರಿ,
ತಾಂತ್ರಿಕ ಹಾಗೂ ಜಾಗೃತಾ ಕೋಶ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು. ದಿನಾಂಕಃ 23/08/2008.

ರವರಿಗೆ,
ಕಾರ್ಯನಿರ್ವಾಹಕ ಇಂಜಿನಿಯರ್ (ವಿ),
(ವಾ. ಕಾ ಮತ್ತು ಪ) ರವರ ಕಛೇರಿ
ಉತ್ತರ ವಿಭಾಗ, ಬಿ.ವಿ.ಕಂ.,
ರಾಜಾಜಿನಗರ ಬೆಂಗಳೂರು–10.

ವಿಷಯ: ವಾರ್ಡ್ ಸಂಖ್ಯೆ–14ರ ರಾಜಾಜಿನಗರದ ಒಂದನೇಯ ಬ್ಲ್ಯಾಕ್,ಒಂದನೇಯ ಮುಖ್ಯರಸ್ತೆಯ, ಸ್ವತ್ತಿನ ಸಂಖ್ಯೆ–33 (ಹಳೆಯ ಸಂಖ್ಯೆ–47) ರಲ್ಲಿನ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ನೀಡುವ ಬಗ್ಗೆ.

ಉಲ್ಲೇಖ: (1) ಸಂ–ಕಾನಿಇಂ(ವಿ)/ಉವಿ/ಸಕಾಇಂ(ಕ)/ಕಿ.ಇಂ–1/34983500 ದಿನಾಂಕ: 19/8/2008.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ಸ್ವತ್ತಿನ ಸಂಖ್ಯೆ–33 (ಹಳೆಯ ಸಂಖ್ಯೆ–47) ರಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ಕಲ್ಪಿಸುವ ಸಲುವಾಗಿ ಸಲ್ಲಿಸಿರುವ ನೀಲಿ ನಕ್ಷೆಯ ಮಂಜೂರಾತಿಯ ಬಗ್ಗೆ ಪರಿಶೀಲಿಸಿ ಧೃಡೀಕರಿಸಬೇಕಾಗಿ ಕೋರಿರುತ್ತೀರಿ. ದಿನಾಂಕ: 21/8/2008 ರಂದು ಉಲ್ಲೇಖಿತ ಪತ್ರವು ಈ ಕಛೇರಿಯಲ್ಲಿ ಸ್ವೀಕೃತಗೊಂಡಿರುತ್ತದೆ.

ಸದರಿ ಸ್ವತ್ತಿನಲ್ಲಿ ಸ್ಟಿಲ್ಟ್, ನೆಲ, ಎರಡು ಮೇಲು ಅಂತಸ್ತು ಮತ್ತು ಟೆರೇಸ್ ಪ್ಲೋರ್ ಕಟ್ಟಡವನ್ನು ನಿರ್ಮಿಸಲು ಪಾಲಿಕೆಯ ಸಹಾಯಕ ನಿರ್ದೇಶಕರು ನಗರಯೋಜನೆ (ಪಶ್ಚಿಮ) ರವರು ದಿನಾಂಕ: 11/9/2006 (ಎಲ್.ಪಿ. ಸಂಖ್ಯೆ–ಜಂಟಿ ಆಯುಕ್ತರು(ಪಶ್ಚಿಮ)/ಎಂಎಲ್‌ಪಿ/469/06–07) ರಂದು ನಕ್ಷೆ ಮಂಜೂರಾತಿಯನ್ನು ನೀಡಿರುತ್ತಾರೆ.

ಸದರಿ ಸ್ವತ್ತಿನಲ್ಲಿನ ಕಟ್ಟಡವನ್ನು ದಿನಾಂಕ: 22/8/2008 ರಂದು ಈ ವಿಭಾಗದ ಕಾರ್ಯಪಾಲಕ ಇಂಜಿನಿಯರ್ (ಟಿ.ವಿ.ಸಿ.ಸಿ.–ಪಶ್ಚಿಮ) ರವರು ಪರಿವೀಕ್ಷಿಸಿರುತ್ತಾರೆ. ಕಟ್ಟಡ ಕಾಮಗಾರಿಯು ಪೂರ್ಣಗೊಂಡಿದ್ದು, ಹಾಲಿ ಸ್ಟಿಲ್ಟ್, ನೆಲ, ಎರಡು ಮೇಲು ಅಂತಸ್ತು ಮತ್ತು ಟೆರೇಸ್ ಪ್ಲೋರ್ ಕಟ್ಟಡವನ್ನು ನಿರ್ಮಿಸಿರುವುದಾಗಿ ನಡುಜಾಗಗಳನ್ನು ಮಂಜೂರಾತಿನಕ್ಷೆಯೊಂದಿಗೆ ಹೋಲಿಸಿದಾಗ, ಕಡಿಮೆ ಬಿಟ್ಟಿದ್ದು, (ಉಲ್ಲಂಘನೆ ಶೇ 54% ಸರಾಸರಿ) ಮಂಜೂರಾತಿ ನಕ್ಷೆಯನ್ನು ಉಲ್ಲಂಘಿಸಿ ಭಾಗಶಃ ಸ್ಟಿಲ್ಟ್ ಪ್ಲೋರ್ ಮತ್ತು ಟೆರೇಸ್ ಪ್ಲೋರ್ ಅನ್ನು ವಾಸ ಮಾಡುವ ಉದ್ದೇಶಕ್ಕಾಗಿ ನಿರ್ಮಿಸಿರುವುದಾಗಿ, ಕಟ್ಟಡದ ಎತ್ತರವನ್ನು ಹೆಚ್ಚಾಗಿ ನಿರ್ಮಿಸಿರುವುದಾಗಿ ಮತ್ತು ಕಟ್ಟಡದ ಮುಂಭಾಗದಲ್ಲಿ ಎಲ್ಲಾ ಅಂತಸ್ತುಗಳಲ್ಲಿನ roof slab ಗಳನ್ನು ನಡುಜಾಗದಲ್ಲಿ ವಿಸ್ತರಿಸಿರುವುದಾಗಿ ವರದಿ ಮಾಡಿರುತ್ತಾರೆ.

ಸದರಿ ಕಟ್ಟಡವನ್ನು ಮಂಜೂರಾತಿ ನಕ್ಷೆಯಂತೆ ನಿರ್ಮಿಸದೇ, ಕಟ್ಟಡ ಉಪವಿಧಿಗಳ ಉಲ್ಲಂಘನೆ ಮಾಡಿರುವುದರಿಂದ ಈ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ನೀಡದಂತೆ ಕ್ರಮ ವಹಿಸಲು ತಿಳಿಸಿದೆ.

ಅಧೀಕ್ಷಕ ಅಭಿಯಂತರರು 23/8/08
ತಾಂತ್ರಿಕ ಹಾಗೂ ಜಾಗೃತ ಕೋಶ

2628
26/8/08

ಪ್ರತಿಯನ್ನು

1) ಪ್ರತಿಯನ್ನು ಮಾನ್ಯ ಆಯುಕ್ತರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಪ್ರತಿಯನ್ನು ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ಗಾಯಿತ್ರಿನಗರ) ರವರಿಗೆ ಕಳುಹಿಸುತ್ತಾ ಸದರಿ ಕಟ್ಟಡದಲ್ಲಿನ ಅನಧಿಕೃತ ನಿರ್ಮಾಣ/ಕಟ್ಟಡದ ಉಪವಿಧಿಗಳಿಗೆ ವ್ಯತಿರಿಕ್ತವಾಗಿ ನಿರ್ಮಿಸಿರುವ ಭಾಗಗಳನ್ನು ತೆರವುಗೊಳಿಸಲು ಕೆ.ಎಂ.ಸಿ. ಕಾಯ್ದೆ 1976 ಅನ್ವಯ ತೆಗೆದುಕೊಂಡ ಕ್ರಮಗಳ ಬಗೆಗಿನ ದಾಖಲೆಗಳನ್ನು ವಿವರವಾದ ವರದಿಯೊಂದಿಗೆ ಸಲ್ಲಿಸಲು ಸೂಚಿಸಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

5

ಸಂಖ್ಯೆಃ ಅಅ/ಟಿ.ವಿ.ಸಿ.ಸಿ./ಜಿಎಲ್/43/08–09

ಅಧೀಕ್ಷಕ ಅಭಿಯಂತರರ ಕಛೇರಿ,
ತಾಂತ್ರಿಕ ಹಾಗೂ ಜಾಗೃತಾ ಕೋಶ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು. ದಿನಾಂಕಃ 29/08/2008.

ರವರಿಗೆ,
ಕಾರ್ಯನಿರ್ವಾಹಕ ಇಂಜಿನಿಯರ್ (ವಿ),
ಅಧಿಕ ಕೇಂದ್ರ ವಿಭಾಗ, ಬೆಸ್ಕಾಂ,
ಯು.ಎ.ಎಸ್. ಕ್ಯಾಂಪಸ್, ಹೆಬ್ಬಾಳ,
ಬೆಂಗಳೂರು–28.

ವಿಷಯ: ವಾರ್ಡ್ ಸಂಖ್ಯೆ–100ರ ಸಂಜಯ್‌ನಗರದ, ಎನ್.ಎಸ್.ಹಳ್ಳಿ, ಸರ್ವೆ ಸಂಖ್ಯೆ– 7/7, ಸ್ವತ್ತಿನ ಸಂಖ್ಯೆ–11 ರಲ್ಲಿನ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ನೀಡುವ ಬಗ್ಗೆ.

ಉಲ್ಲೇಖ: No. EEE/ACD/AEE(O)/2008-09- 4227-28 ದಿನಾಂಕ: 20/8/2008.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ಸರ್ವೆ ನಂ.7/7, ಸ್ವತ್ತಿನ ಸಂಖ್ಯೆ–11ರಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ಕಲ್ಪಿಸುವ ಸಲುವಾಗಿ ಕಟ್ಟಡ ಸುರಕ್ಷತಾ ಪ್ರಮಾಣ ಪತ್ರ ನೀಡಲು ಕೋರಿರುತ್ತೀರಿ. ಉಲ್ಲೇಖಿತ ಪತ್ರವು ದಿನಾಂಕ: 25/8/2008 ರಂದು ಈ ಕಛೇರಿಯಲ್ಲಿ ಸ್ವೀಕೃತಗೊಂಡಿರುತ್ತದೆ.

ಸದರಿ ಸ್ವತ್ತಿನಲ್ಲಿ ವಸತಿ ಅಪಾರ್ಟ್‌ಮೆಂಟ್ ಉಪಯೋಗಕ್ಕಾಗಿ ಸ್ಟಿಲ್ಟ್, ನೆಲ ಮತ್ತು ಮೂರು ಮೇಲು ಅಂತಸ್ತುಗಳ ಜೊತೆಗೆ ಟೆರೇಸ್ ಪ್ಲೋರ್ ಕಟ್ಟಡವನ್ನು ನಿರ್ಮಿಸಲು, ಪಾಲಿಕೆಯ ಜಂಟಿ ಆಯುಕ್ತರು (ಪಶ್ಚಿಮ) ರವರು (ಎಲ್‌ಪಿ ಸಂಖ್ಯೆ. 819/06–07) ದಿನಾಂಕ: 29/12/2006 ರಂದು ನಕ್ಷೆ ಮಂಜೂರಾತಿಯನ್ನು ನೀಡಿರುತ್ತಾರೆ.

ಸದರಿ ಸ್ವತ್ತಿನಲ್ಲಿನ ಕಟ್ಟಡವನ್ನು ದಿನಾಂಕ: 25/8/2008 ರಂದು ಈ ವಿಭಾಗದ ಕಾರ್ಯಪಾಲಕ ಇಂಜಿನಿಯರ್ (ಟಿ.ವಿ.ಸಿ.ಸಿ.–ಪಶ್ಚಿಮ) ರವರು ಪರಿವೀಕ್ಷಿಸಿರುತ್ತಾರೆ. ಬಣ್ಣ ಬಳಿಯುವ ಕಾರ್ಯವು ಪ್ರಗತಿಯಲ್ಲಿದ್ದು, ನಿರ್ಮಾಣವನ್ನು ಮಂಜೂರಾತಿ ನಕ್ಷೆಯೊಂದಿಗೆ ಹೋಲಿಸಿದಾಗ ನಡುಜಾಗಗಳನ್ನು ಕಡಿಮೆ ಬಿಟ್ಟಿದ್ದು, (ಉಲ್ಲಂಘನೆ ಸರಾಸರಿ ಶೇ 17.73% ರಷ್ಟು), ಪ್ರಾರಂಭಿಕ ಮತ್ತು ಸ್ವಾಧೀನಾನುಭವ ಪ್ರಮಾಣ ಪತ್ರಗಳನ್ನು ಈ ಕಟ್ಟಡಕ್ಕೆ ಪಡೆದಿರುವುದಿಲ್ಲವೆಂದು ವರದಿ ಮಾಡಿರುತ್ತಾರೆ. ಅಲ್ಲದೇ ಸ್ಟಿಲ್ಟ್ ಪ್ಲೋರ್‌ನ ಭಾಗಶಃ ಪ್ರದೇಶವನ್ನು ಪಾರ್ಟಿಹಾಲಾಗಿ ಬದಲಾವಣೆ ಮಾಡಿರುತ್ತಾರೆಂದು ಸಹ ವರದಿ ಮಾಡಿರುತ್ತಾರೆ.

ಸದರಿ ಕಟ್ಟಡವನ್ನು ಮಂಜೂರಾತಿ ನಕ್ಷೆಯಂತೆ ನಿರ್ಮಾಣ ಮಾಡದೇ ಕಟ್ಟಡ ಉಪವಿಧಿಗಳ ಉಲ್ಲಂಘನೆ ಮಾಡಿರುವುದರಿಂದ, ಈ ಕಟ್ಟಡಕ್ಕೆ ವಿದ್ಯುತ್ ಸಂಪರ್ಕ ನೀಡದಂತೆ ಕ್ರಮ ವಹಿಸಲು ತಿಳಿಸಿದೆ.

S. Prabhakar 29/8/08
ಅಧೀಕ್ಷಕ ಅಭಿಯಂತರರು
ತಾಂತ್ರಿಕ ಹಾಗೂ ಜಾಗೃತ ಕೋಶ

1. ಪ್ರತಿಯನ್ನು ಮಾನ್ಯ ಆಯುಕ್ತರು ರವರ ಅವಗಾಹನೆಗಾಗಿ ಸಲ್ಲಿಸಿದೆ.

2. ಪ್ರತಿಯನ್ನು ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ಸಂಜಯನಗರ) ರವರಿಗೆ ಕಳುಹಿಸುತ್ತಾ ಸದರಿ ಕಟ್ಟಡದಲ್ಲಿನ ಅನಧಿಕೃತ ನಿರ್ಮಾಣ/ಕಟ್ಟಡದ ಉಪವಿಧಿಗಳಿಗೆ ವ್ಯತಿರಿಕ್ತವಾಗಿ ನಿರ್ಮಿಸಿರುವ ಭಾಗಗಳನ್ನು ತೆರವುಗೊಳಿಸಲು ಕೆ.ಎಂ.ಸಿ. ಕಾಯ್ದೆ 1976 ಅನ್ವಯ ತೆಗೆದುಕೊಂಡ ಕ್ರಮಗಳ ಬಗೆಗಿನ ದಾಖಲೆಗಳನ್ನು ವಿವರವಾದ ವರದಿಯೊಂದಿಗೆ ಸಲ್ಲಿಸಲು ಸೂಚಿಸಿದೆ.

M.F

Executive Engineer
From No 2752
Dt:No 2/9/08
Central Dn., BESCOM, Bang

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

6

ಸಂಖ್ಯೆಃ ಅಅ/ಟಿ.ವಿ.ಸಿ.ಸಿ./ಜಿಎಲ್/45/08–09

ಅಧೀಕ್ಷಕ ಅಭಿಯಂತರರ ಕಛೇರಿ,
ತಾಂತ್ರಿಕ ಹಾಗೂ ಜಾಗೃತಾ ಕೋಶ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು. ದಿನಾಂಕಃ 30/08/2008.

ರವರಿಗೆ,
ಕಾರ್ಯನಿರ್ವಾಹಕ ಇಂಜಿನಿಯರ್ (ವಿ),
ಕಾರ್ಯನಿರ್ವಾಹಕ (ವಿ.ಸಿ.ಸಿ. ಕಾ ಮತ್ತು ಪ) ರವರ ಕಛೇರಿ
ಉತ್ತರ ವಿಭಾಗ, ಬಿ.ವಿ.ಕಂ.,
ರಾಜಾಜಿನಗರ ಬೆಂಗಳೂರು–10.

ವಿಷಯ: ವಾರ್ಡ್ ಸಂಖ್ಯೆ–22ರ ರಾಜಾಜಿನಗರದ, 3ನೇ ಬ್ಲಾಕ್, 46ನೇಯ 'ಎ' ಕ್ರಾಸ್‌ನ ಸ್ವತ್ತಿನ ಸಂಖ್ಯೆ–11, (ಹಳೆಯ ಸಂಖ್ಯೆ–640) ರಲ್ಲಿನ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ನೀಡುವ ಬಗ್ಗೆ.

ಉಲ್ಲೇಖ: ಸಂ–ಕಾನಿಇಂ(ವಿ)/ಉವಿ/ಸಕಾಇಂ(ಕ)/3747–49 ದಿನಾಂಕ: 25/8/2008.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ಸ್ವತ್ತಿನ ಸಂಖ್ಯೆ–11, (ಹಳೆಯ ಸಂಖ್ಯೆ–640) ರಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ಕಲ್ಪಿಸುವ ಸಲುವಾಗಿ ಸಲ್ಲಿಸಿರುವ ನೀಲಿ ನಕ್ಷೆಯ ಮಂಜೂರಾತಿಯ ಬಗ್ಗೆ ಪರಿಶೀಲಿಸಿ ಧೃಡೀಕರಿಸಬೇಕಾಗಿ ಕೋರಿರುತ್ತೀರಿ. ಉಲ್ಲೇಖಿತ ಪತ್ರವು ದಿನಾಂಕ: 26/8/2008 ರಂದು ಈ ಕಛೇರಿಯಲ್ಲಿ ಸ್ವೀಕೃತಗೊಂಡಿರುತ್ತದೆ.

ಸದರಿ ಸ್ವತ್ತಿನಲ್ಲಿ ವಸತಿ ಉಪಯೋಗಕ್ಕಾಗಿ ಬೇಸ್‌ಮೆಂಟ್, ನೆಲ ಮತ್ತು ಮೂರು ಮೇಲು ಅಂತಸ್ತುಗಳ ಜೊತೆಗೆ ಟೆರೇಸ್ ಪ್ಲೋರ್ ಕಟ್ಟಡವನ್ನು ನಿರ್ಮಿಸಲು, ಪಾಲಿಕೆಯ ಜಂಟಿ ಆಯುಕ್ತರು (ಪಶ್ಚಿಮ) ರವರು (ಎಲ್‌ಪಿ ಸಂಖ್ಯೆ. 195/06–07) ದಿನಾಂಕ: 28/06/2006 ರಂದು ನಕ್ಷೆ ಮಂಜೂರಾತಿಯನ್ನು ನೀಡಿರುತ್ತಾರೆ.

ಸದರಿ ಸ್ವತ್ತಿನಲ್ಲಿನ ಕಟ್ಟಡವನ್ನು ದಿನಾಂಕ: 29/8/2008 ರಂದು ಈ ವಿಭಾಗದ ಕಾರ್ಯಪಾಲಕ ಇಂಜಿನಿಯರ್ (ಟಿ.ವಿ.ಸಿ.ಸಿ.–ಪಶ್ಚಿಮ) ರವರು ಪರಿವೀಕ್ಷಿಸಿರುತ್ತಾರೆ. ನಿರ್ಮಾಣ ಕಾರ್ಯವು ಪ್ರಗತಿಯಲ್ಲಿರುತ್ತದೆ ಎಂದು, ನಿರ್ಮಾಣವನ್ನು ಮಂಜೂರಾತಿ ನಕ್ಷೆಯೊಂದಿಗೆ ಹೋಲಿಸಿದಾಗ ನಡುಜಾಗಗಳನ್ನು ಕಡಿಮೆ ಬಿಟ್ಟಿದ್ದು, (ಉಲ್ಲಂಘನೆ ಸರಾಸರಿ ಶೇ 31.25% ರಷ್ಟು), ಮಂಜೂರಾತಿಯನ್ನು ವಸತಿ ಕಟ್ಟಡ ನಿರ್ಮಿಸಲು ನೀಡಲಾಗಿದ್ದು, ಹಾಲಿ ವಾಣಿಜ್ಯ ಉಪಯೋಗಕ್ಕಾಗಿ ಕಟ್ಟಡ ನಿರ್ಮಿಸುತ್ತಿರುವುದಾಗಿ ಹಾಗೂ ಬೇಸ್‌ಮೆಂಟ್‌ನ್ನು ವಾಹನ ನಿಲುಗಡೆಯ ಉದ್ದೇಶಕ್ಕೆ ಉಪಯೋಗಿಸದೇ ಸ್ಟೋರೆಜ್ ರೂಮ್ ಆಗಿ ಪರಿವರ್ತನೆ ಮಾಡಿರುವುದಾಗಿ ಮತ್ತು ನಾಲ್ಕನೇಯ ಅಂತಸ್ತನ್ನು ಅನಧಿಕೃತವಾಗಿ ನಿರ್ಮಾಣ ಮಾಡಿರುವುದಾಗಿ ಅಲ್ಲದೇ ಈ ಕಟ್ಟಡಕ್ಕೆ ಪ್ರಾರಂಭಿಕ ಮತ್ತು ಸ್ವಾಧೀನಾನುಭವ ಪ್ರಮಾಣ ಪತ್ರಗಳನ್ನು ಪಡೆದಿರುವುದಿಲ್ಲವೆಂದು ವರದಿ ಮಾಡಿರುತ್ತಾರೆ.

ಸದರಿ ಕಟ್ಟಡವನ್ನು ಮಂಜೂರಾತಿ ನಕ್ಷೆಯಂತೆ ನಿರ್ಮಾಣ ಮಾಡದೇ ಕಟ್ಟಡ ಉಪವಿಧಿಗಳ ಉಲ್ಲಂಘನೆ ಮಾಡಿರುವುದರಿಂದ, ಈ ಕಟ್ಟಡಕ್ಕೆ ವಿದ್ಯುತ್ ಸಂಪರ್ಕ ನೀಡದಂತೆ ಕ್ರಮ ವಹಿಸಲು ತಿಳಿಸಿದೆ.

ಅಧೀಕ್ಷಕ ಅಭಿಯಂತರರು 30/8/08
ತಾಂತ್ರಿಕ ಹಾಗೂ ಜಾಗೃತ ಕೋಶ

1. ಪ್ರತಿಯನ್ನು ಮಾನ್ಯ ಆಯುಕ್ತರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಪ್ರತಿಯನ್ನು ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ಶ್ರೀರಾಮಮಂದಿರ) ರವರಿಗೆ ಕಳುಹಿಸುತ್ತಾ ಸದರಿ ಕಟ್ಟಡದಲ್ಲಿನ ಅನಧಿಕೃತ ನಿರ್ಮಾಣ/ಕಟ್ಟಡದ ಉಪವಿಧಿಗಳಿಗೆ ವ್ಯತಿರಿಕ್ತವಾಗಿ ನಿರ್ಮಿಸಿರುವ ಭಾಗಗಳನ್ನು ತೆರವುಗೊಳಿಸಲು ಕೆ.ಎಂ.ಸಿ. ಕಾಯ್ದೆ 1976 ಅನ್ವಯ ತೆಗೆದುಕೊಂಡ ಕ್ರಮಗಳ ಬಗೆಗಿನ ದಾಖಲೆಗಳನ್ನು ವಿವರವಾದ ವರದಿಯೊಂದಿಗೆ ಸಲ್ಲಿಸಲು ಸೂಚಿಸಿದೆ.

MF

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

7

ಸಂಖ್ಯೆಃ ಅಅ/ಟಿ.ವಿ.ಸಿ.ಸಿ./ಜಿಎಲ್/38/08–09

ಅಧೀಕ್ಷಕ ಅಭಿಯಂತರರ ಕಛೇರಿ,
ತಾಂತ್ರಿಕ ಹಾಗೂ ಜಾಗೃತಾ ಕೋಶ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು. ದಿನಾಂಕಃ 30/08/2008.

ರವರಿಗೆ,
ಕಾರ್ಯನಿರ್ವಾಹಕ ಇಂಜಿನಿಯರ್ (ವಿ),
ಅಧಿಕ ಕೇಂದ್ರ ವಿಭಾಗ, ಬೆಸ್ಕಾಂ,
ಯು.ಎ.ಎಸ್. ಕ್ಯಾಂಪಸ್, ಹೆಬ್ಬಾಳ,
ಬೆಂಗಳೂರು–28.

ವಿಷಯ: ವಾರ್ಡ್ ಸಂಖ್ಯೆ–100ರ ಸಂಜಯ್‌ನಗರದ, ಎನ್.ಎಸ್.ಹಳ್ಳಿ, ಫ್ಲೋರೆನ್ಸ್ ಸ್ಕೂಲ್ ರಸ್ತೆಯ, ಸ್ವತ್ತಿನ ಸಂಖ್ಯೆ– 4 ರಲ್ಲಿನ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ನೀಡುವ ಬಗ್ಗೆ.

ಉಲ್ಲೇಖ: No. EEE/ACD/AEE(O)/2008-09- 4028 ದಿನಾಂಕ: 16/8/2008.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ಸ್ವತ್ತಿನ ಸಂಖ್ಯೆ– 4 ರಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ಕಲ್ಪಿಸುವ ಸಲುವಾಗಿ ಕಟ್ಟಡ ಸುರಕ್ಷತಾ ಪ್ರಮಾಣ ಪತ್ರ ನೀಡಲು ಕೋರಿರುತ್ತೀರಿ. ಉಲ್ಲೇಖಿತ ಪತ್ರವು ದಿನಾಂಕ: 25/8/2008 ರಂದು ಈ ಕಛೇರಿಯಲ್ಲಿ ಸ್ವೀಕೃತಗೊಂಡಿರುತ್ತದೆ.

ಸದರಿ ಸ್ವತ್ತಿನಲ್ಲಿ ಕಟ್ಟಡವನ್ನು ನಿರ್ಮಿಸಲು, ಪಾಲಿಕೆಯ ಜಂಟಿ ಆಯುಕ್ತರು (ಪಶ್ಚಿಮ) ರವರು (ಎಲ್‌ಪಿ ಸಂಖ್ಯೆ. 235/08–09) ದಿನಾಂಕ: 2/5/2008 ರಂದು ನಕ್ಷೆ ಮಂಜೂರಾತಿಯನ್ನು ನೀಡಿರುತ್ತಾರೆ.

ಸದರಿ ಸ್ವತ್ತಿನಲ್ಲಿನ ಕಟ್ಟಡವನ್ನು ದಿನಾಂಕ: 27/8/2008 ರಂದು ಈ ವಿಭಾಗದ ಕಾರ್ಯಪಾಲಕ ಇಂಜಿನಿಯರ್ (ಟಿ.ವಿ.ಸಿ.ಸಿ.–ಪಶ್ಚಿಮ) ರವರು ಪರಿವೀಕ್ಷಿಸಿರುತ್ತಾರೆ. ನಿರ್ಮಾಣ ಕಾರ್ಯವು ಪಾಯದ ಹಂತದಲ್ಲಿರುವುದರಿಂದ ವ್ಯತಿರಿಕ್ತ/ಅನಧಿಕೃತ ನಿರ್ಮಾಣವನ್ನು ನಿಖರವಾಗಿ ಗುರುತಿಸಲು ಸಾಧ್ಯವಾಗಿಲ್ಲವೆಂದು ವರದಿ ಮಾಡಿರುತ್ತಾರೆ.

ನಿರ್ಮಾಣವು **ಪೂರ್ಣಪ್ರಮಾಣದಲ್ಲಿ ಮುಗಿದಿರುವಂತಹ ಕಟ್ಟಡಗಳ** ಸುರಕ್ಷತೆಯ ಬಗ್ಗೆ ವರದಿ ಪಡೆಯುವುದರ ಬಗ್ಗೆ ಸ್ಪಷ್ಟ ಆದೇಶವಿದ್ದರೂ ಸಹ **ನಿರ್ಮಾಣ ಹಂತದಲ್ಲಿರುವ ಅಪೂರ್ಣಗೊಂಡಂತಹ ಕಟ್ಟಡಗಳ** ಬಗ್ಗೆ ಸುರಕ್ಷತೆ ವರದಿ ನೀಡಲು ಕೋರಿಕೆ ಸಲ್ಲಿಸಿರುವುದು ವಿಷಾದನೀಯವಾಗಿರುತ್ತದೆ. ಈ ತರಹದ ಅಸಮಂಜಸ ಕೋರಿಕೆಗಳನ್ನು ಇನ್ನು ಮುಂದೆ ಈ ಕಛೇರಿಗೆ ಸಲ್ಲಿಸದಂತೆ ಕ್ರಮ ವಹಿಸಲು ತಿಳಿಸಿದೆ.

ಕಟ್ಟಡ ನಿರ್ಮಾಣವು ಪಾಯದ ಹಂತದಲ್ಲಿ ಇರುವುದರಿಂದ, ಕಟ್ಟಡದ ಬಗ್ಗೆ ವರದಿಯನ್ನು ನೀಡಲು ಸಾಧ್ಯವಾಗಿರುವುದಿಲ್ಲ. ಆದ್ದುದರಿಂದ ನಿರ್ಮಾಣ ಪೂರ್ಣಗೊಂಡ ನಂತರ ಕೋರಿಕೆ ಸಲ್ಲಿಸಿದ್ದಲ್ಲಿ ಕಟ್ಟಡದ ಬಗ್ಗೆ ವರದಿಯನ್ನು ನೀಡಲಾಗುವುದು, ಹಾಗೂ ವರದಿ ಅಧಾರದ ಮೇಲೆ ವಿದ್ಯುತ್ ಸಂಪರ್ಕ ನೀಡುವ ಬಗ್ಗೆ ಕ್ರಮ ಕೈಗೊಳ್ಳಬಹುದಾಗಿರುತ್ತದೆ.

ಅಧೀಕ್ಷಕ ಅಭಿಯಂತರರು 30/8/08
ತಾಂತ್ರಿಕ ಹಾಗೂ ಜಾಗೃತ ಕೋಶ

1. ಪ್ರತಿಯನ್ನು ಮಾನ್ಯ ಆಯುಕ್ತರು ರವರ ಅವಗಾಹನೆಗಾಗಿ ಸಲ್ಲಿಸಿದೆ.

MF

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

8

ಸಂಖ್ಯೆಃ ಅಅ/ಟಿ.ವಿ.ಸಿ.ಸಿ./ಜಿಎಲ್/41 /08–09

ಅಧೀಕ್ಷಕ ಅಭಿಯಂತರರ ಕಛೇರಿ,
ತಾಂತ್ರಿಕ ಹಾಗೂ ಜಾಗೃತಾ ಕೋಶ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು. ದಿನಾಂಕಃ 1/09/2008.
2

ರವರಿಗೆ,
ಕಾರ್ಯನಿರ್ವಾಹಕ ಇಂಜಿನಿಯರ್ (ವಿ),
ಅಧಿಕ ಕೇಂದ್ರ ವಿಭಾಗ, ಬೆಸ್ಕಾಂ,
ಯು.ಎ.ಎಸ್. ಕ್ಯಾಂಪಸ್, ಹೆಬ್ಬಾಳ,
ಬೆಂಗಳೂರು–28.

NTI 8

ವಿಷಯ: ವಾರ್ಡ್ ಸಂಖ್ಯೆ–100ರ, ಸಂಜಯನಗರದ, ಎಸ್.ಬಿ.ಐ. ಲೇಔಟ್, 2ನೇ ಹಂತದ ಸ್ವತ್ತಿನ ಸಂಖ್ಯೆ–A11 ರಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ನೀಡುವ ಬಗ್ಗೆ.

ಉಲ್ಲೇಖ: No. EEE/ACD/AEE(O)/2008-09-4077-78 ದಿನಾಂಕ: 18/8/2008.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ಸ್ವತ್ತಿನ ಸಂಖ್ಯೆ–411ರಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ಕಲ್ಪಿಸುವ ಸಲುವಾಗಿ ಕಟ್ಟಡ ಸುರಕ್ಷತಾ ಪ್ರಮಾಣ ಪತ್ರ ನೀಡಲು ಕೋರಿರುತ್ತೀರಿ. ಉಲ್ಲೇಖಿತ ಪತ್ರವು ದಿನಾಂಕ: 25/8/2008 ರಂದು ಈ ಕಛೇರಿಯಲ್ಲಿ ಸ್ವೀಕೃತಗೊಂಡಿರುತ್ತದೆ.

ಸದರಿ ಸ್ವತ್ತಿನಲ್ಲಿನ ಕಟ್ಟಡವನ್ನು ದಿನಾಂಕ: 02/9/2008 ರಂದು ಈ ವಿಭಾಗದ ಕಾರ್ಯಪಾಲಕ ಇಂಜಿನಿಯರ್ (ಟಿ.ವಿ.ಸಿ.ಸಿ.–ಪಶ್ಚಿಮ) ರವರು ಪರಿವೀಕ್ಷಿಸಿರುತ್ತಾರೆ. ಸದರಿ ಸ್ವತ್ತಿನಲ್ಲಿ ವಸತಿ ಅಪಾರ್ಟ್‌ಮೆಂಟ್ ಉಪಯೋಗಕ್ಕಾಗಿ ಬೇಸ್‌ಮೆಂಟ್, ನೆಲ ಮತ್ತು 19 ಮೇಲು ಅಂತಸ್ತುಳ್ಳ ಕಟ್ಟಡವನ್ನು ನಿರ್ಮಿಸಲು, ಜಂಟಿ ನಿರ್ದೇಶಕರು ನಗರಯೋಜನೆ ರವರು (ಎಲ್‌ಪಿ ಸಂಖ್ಯೆ. 26/06–07) ದಿನಾಂಕ: 29/05/2007 ರಂದು ನಕ್ಷೆ ಮಂಜೂರಾತಿಯನ್ನು ನೀಡಿರುತ್ತಾರೆಂದು, ನಿರ್ಮಾಣ ಕಾರ್ಯವು ಪ್ರಗತಿಯಲ್ಲಿದ್ದು, ನಿರ್ಮಾಣವನ್ನು ಮಂಜೂರಾತಿ ನಕ್ಷೆಯೊಂದಿಗೆ ಹೋಲಿಸಿದಾಗ ನಡುಜಾಗಗಳನ್ನು ಮಂಜೂರಾತಿಗೆ ಅನುಗುಣವಾಗಿ ಇರುವುದಾಗಿ, ಕಟ್ಟಡದ ಹಿಂಭಾಗದಲ್ಲಿ ಕಾಂಪೌಂಡ್ ನಿರ್ಮಿಸಲು ಮಣ್ಣು ಅಗೆದಿದ್ದ ಕಾರಣ ಕಟ್ಟಡದ ಹಿಂದಿನ ನಡುಜಾಗಗಳನ್ನು ಅಳತೆ ಮಾಡಲು ಸಾಧ್ಯವಾಗಿರುವುದಿಲ್ಲವೆಂದು, ಕಟ್ಟಡದ ಮುಂದಿನ ನಡುಜಾಗದಲ್ಲಿ ಸೈಟ್ ಅಫೀಸ್‌ನ್ನು ನಿರ್ಮಿಸಿರುವುದಾಗಿ ಹಾಗೂ ಸ್ವಾಧೀನಾನುಭವ ಪ್ರಮಾಣ ಪತ್ರಗಳನ್ನು ಈ ಕಟ್ಟಡಕ್ಕೆ ಪಡೆದಿರುವುದಿಲ್ಲವೆಂದು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

ಸದರಿ ಕಟ್ಟಡವು ನಿರ್ಮಾಣ ಹಂತದಲ್ಲಿ ಇರುವುದರಿಂದ ವ್ಯತಿರಿಕ್ತ/ಅನಧಿಕೃತ ನಿರ್ಮಾಣವನ್ನು ನಿಖರವಾಗಿ ಗುರುತಿಸಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ ಸದರಿ ಕಟ್ಟಡಕ್ಕೆ ಈ ಹಂತದಲ್ಲಿ ವಿದ್ಯುತ್ ಸಂಪರ್ಕ ನೀಡದಂತೆ ಕ್ರಮ ವಹಿಸಲು ತಿಳಿಸಿದೆ.

S. Prashanth 2/9/08
ಅಧೀಕ್ಷಕ ಅಭಿಯಂತರರು
ತಾಂತ್ರಿಕ ಹಾಗೂ ಜಾಗೃತ ಕೋಶ

1) ಪ್ರತಿಯನ್ನು ಮಾನ್ಯ ಆಯುಕ್ತರು ರವರ ಅವಗಾಹನೆಗಾಗಿ ಸಲ್ಲಿಸಿದೆ.

2) ಪ್ರತಿಯನ್ನು ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ಸಂಜಯನಗರ) ರವರಿಗೆ ಕಳುಹಿಸುತ್ತಾ, ವ್ಯತಿರಿಕ್ತ/ಅನಧಿಕೃತ ಕಟ್ಟಡ ನಿರ್ಮಾಣ ಮಾಡದಂತೆ ಕ್ರಮವಹಿಸಲು ಸೂಚಿಸಿದೆ.

F

Executive Engineer Diary No. 2770 Dated 4/9/08 Audit Central Div., BESCOM, Bangalore-24

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

9

ಸಂಖ್ಯೆಃ ಅಅ/ಟಿ.ವಿ.ಸಿ.ಸಿ./ಜಿಎಲ್/ 62 /08–09

ಅಧೀಕ್ಷಕ ಅಭಿಯಂತರರ ಕಛೇರಿ,
ತಾಂತ್ರಿಕ ಹಾಗೂ ಜಾಗೃತಾ ಕೋಶ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು. ದಿನಾಂಕಃ 1/09/2008.

ರವರಿಗೆ,
ಕಾರ್ಯನಿರ್ವಾಹಕ ಇಂಜಿನಿಯರ್ (ವಿ),
ಪಶ್ಚಿಮ ವಲಯ, ಬೆಸ್ಕಾಂ,
3ನೇಯ ಮಹಡಿ, ಕ್ರೆಸೆಂಟ್ ಟವರ್,
ಕ್ರೆಸೆಂಟ್ ರಸ್ತೆ, ಬೆಂಗಳೂರು–08.

ವಿಷಯ: ವಾರ್ಡ್ ಸಂಖ್ಯೆ–47ರ ಜೆ.ಸಿ.ರಸ್ತೆಯ, ಸ್ವತ್ತಿನ ಸಂಖ್ಯೆ–91 ರಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ನೀಡುವ ಬಗ್ಗೆ.

ಉಲ್ಲೇಖ: No. EEE/WD/AEE(O)/M(T)/3152 ದಿನಾಂಕ: 22/8/2008.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ಸ್ವತ್ತಿನ ಸಂಖ್ಯೆ–91 ರಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ಕಲ್ಪಿಸುವ ಸಲುವಾಗಿ ಕಟ್ಟಡ ಸುರಕ್ಷತಾ ಪ್ರಮಾಣ ಪತ್ರ ನೀಡಲು ಕೋರಿರುತ್ತೀರಿ. ಉಲ್ಲೇಖಿತ ಪತ್ರವು ದಿನಾಂಕ: 29/8/2008 ರಂದು ಈ ಕಛೇರಿಯಲ್ಲಿ ಸ್ವೀಕೃತಗೊಂಡಿರುತ್ತದೆ.

ಸದರಿ ಸ್ವತ್ತಿನಲ್ಲಿನ ಕಟ್ಟಡವನ್ನು ದಿನಾಂಕ: 30/8/2008 ರಂದು ಈ ವಿಭಾಗದ ಕಾರ್ಯಪಾಲಕ ಇಂಜಿನಿಯರ್ (ಟಿ.ವಿ.ಸಿ.ಸಿ.–(ಪಶ್ಚಿಮ) ರವರು ಪರಿವೀಕ್ಷಿಸಿರುತ್ತಾರೆ. ಸದರಿ ಸ್ವತ್ತಿನಲ್ಲಿ ವಾಣಿಜ್ಯ ಉಪಯೋಗಕ್ಕಾಗಿ ಸ್ಟಿಲ್ಟ್, ನೆಲ ಮತ್ತು ಎರಡು ಮೇಲು ಅಂತಸ್ತುಗಳ ಜೊತೆಗೆ ಟೆರೇಸ್ ಪ್ಲೋರ್ ಕಟ್ಟಡವನ್ನು ನಿರ್ಮಿಸಲು, ಪಾಲಿಕೆಯ ಉಪ ಆಯುಕ್ತರು (ಪಶ್ಚಿಮ) ರವರು (ಎಲ್‌ಪಿ ಸಂಖ್ಯೆ. 1132/06–07) ದಿನಾಂಕ: 10/04/2007 ರಂದು ನಕ್ಷೆ ಮಂಜೂರಾತಿಯನ್ನು ನೀಡಿರುತ್ತಾರೆಂದು, ನಿರ್ಮಾಣ ಕಾರ್ಯವು ಪ್ರಗತಿಯಲ್ಲಿದ್ದು, ನಿರ್ಮಾಣವನ್ನು ಮಂಜೂರಾತಿ ನಕ್ಷೆಯೊಂದಿಗೆ ಹೋಲಿಸಿದಾಗ ನಡುಜಾಗಗಳನ್ನು ಬಿಟ್ಟಿರುವುದಿಲ್ಲವೆಂದು, (ಉಲ್ಲಂಘನೆ ಶೇ 100% ರಷ್ಟು) ಹಾಗೂ ಪ್ರಾರಂಭಿಕ ಮತ್ತು ಸ್ವಾಧೀನಾನುಭವ ಪ್ರಮಾಣ ಪತ್ರಗಳನ್ನು ಈ ಕಟ್ಟಡಕ್ಕೆ ಪಡೆದಿರುವುದಿಲ್ಲವೆಂದು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

ಸದರಿ ಕಟ್ಟಡವನ್ನು ಮಂಜೂರಾತಿ ನಕ್ಷೆಯಂತೆ ನಿರ್ಮಾಣ ಮಾಡದೇ ಕಟ್ಟಡ ಉಪವಿಧಿಗಳ ಉಲ್ಲಂಘನೆ ಮಾಡಿರುವುದರಿಂದ, ಈ ಕಟ್ಟಡಕ್ಕೆ ವಿದ್ಯುತ್ ಸಂಪರ್ಕ ನೀಡದಂತೆ ಕ್ರಮ ವಹಿಸಲು ತಿಳಿಸಿದೆ.

S. Prabhakar 1/9/08
ಅಧೀಕ್ಷಕ ಅಭಿಯಂತರರು
ತಾಂತ್ರಿಕ ಹಾಗೂ ಜಾಗೃತ ಕೋಶ

1. ಪ್ರತಿಯನ್ನು ಮಾನ್ಯ ಆಯುಕ್ತರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಪ್ರತಿಯನ್ನು ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ಚಾಮರಾಜಪೇಟೆ) ರವರಿಗೆ ಕಳುಹಿಸುತ್ತಾ ಸದರಿ ಕಟ್ಟಡದಲ್ಲಿನ ಅನಧಿಕೃತ ನಿರ್ಮಾಣ/ಕಟ್ಟಡದ ಉಪವಿಧಿಗಳಿಗೆ ವ್ಯತಿರಿಕ್ತವಾಗಿ ನಿರ್ಮಿಸಿರುವ ಭಾಗಗಳನ್ನು ತೆರವುಗೊಳಿಸಲು ಕೆ.ಎಂ.ಸಿ. ಕಾಯ್ದೆ 1976 ಅನ್ವಯ ತೆಗೆದುಕೊಂಡ ಕ್ರಮಗಳ ಬಗೆಗಿನ ದಾಖಲೆಗಳನ್ನು ವಿವರವಾದ ವರದಿಯೊಂದಿಗೆ ಸಲ್ಲಿಸಲು ಸೂಚಿಸಿದೆ.

MF

4/9/08
BESCOM West Division
Crescent Road, Madhava Nagar
Bangalore - 560 001

10

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆಃ ಅಅ/ಟಿ.ವಿ.ಸಿ.ಸಿ./ಜಿಎಲ್/68 /08–09

ಅಧೀಕ್ಷಕ ಅಭಿಯಂತರರ ಕಛೇರಿ,
ತಾಂತ್ರಿಕ ಹಾಗೂ ಜಾಗೃತಾ ಕೋಶ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು. ದಿನಾಂಕಃ 1/09/2008.

ರವರಿಗೆ,
ಕಾರ್ಯನಿರ್ವಾಹಕ ಇಂಜಿನಿಯರ್ (ವಿ),
ಅಧಿಕ ಉತ್ತರ ವಲಯ, ಬೆಸ್ಕಾಂ,
ಪೀಣ್ಯ ಬೆಂಗಳೂರು–58.

ವಿಷಯ: ವಾರ್ಡ್ ಸಂಖ್ಯೆ–01ರ ಜಾಲಹಳ್ಳಿಯ (ಪಶ್ಚಿಮ) ಎಸ್.ಎಂ.ರಸ್ತೆಯ, ಸ್ವತ್ತಿನ ಸಂಖ್ಯೆ–8/14 (ಹಳೆಯ ಸಂಖ್ಯೆ–12) ರಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ನೀಡುವ ಬಗ್ಗೆ.

ಉಲ್ಲೇಖ: No. EEE/ANDP/AEE(O)/F-9/3581-83 ದಿನಾಂಕ: 27/8/2008.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ಸ್ವತ್ತಿನ ಸಂಖ್ಯೆ–8/14ರಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ಕಲ್ಪಿಸುವ ಸಲುವಾಗಿ ಕಟ್ಟಡ ಸುರಕ್ಷತಾ ಪ್ರಮಾಣ ಪತ್ರ ನೀಡಲು ಕೋರಿರುತ್ತೀರಿ. ಉಲ್ಲೇಖಿತ ಪತ್ರವು ದಿನಾಂಕ: 29/8/2008 ರಂದು ಈ ಕಛೇರಿಯಲ್ಲಿ ಸ್ವೀಕೃತಗೊಂಡಿರುತ್ತದೆ.

ಸದರಿ ಸ್ವತ್ತಿನಲ್ಲಿನ ಕಟ್ಟಡವನ್ನು ದಿನಾಂಕ: 30/8/2008 ರಂದು ಈ ವಿಭಾಗದ ಕಾರ್ಯಪಾಲಕ ಇಂಜಿನಿಯರ್ (ಟಿ.ವಿ.ಸಿ.ಸಿ.–ಪಶ್ಚಿಮ) ರವರು ಪರಿವೀಕ್ಷಿಸಿರುತ್ತಾರೆ. ಸದರಿ ಸ್ವತ್ತಿನಲ್ಲಿ ವಾಣಿಜ್ಯ ಉಪಯೋಗಕ್ಕಾಗಿ ಸ್ಟಿಲ್ಟ್, ನೆಲ ಮತ್ತು ಮೂರು ಮೇಲು ಅಂತಸ್ತುಳ್ಳ ಕಟ್ಟಡವನ್ನು ನಿರ್ಮಿಸಲು, ಪಾಲಿಕೆಯ ಉಪ ಆಯುಕ್ತರು (ಪಶ್ಚಿಮ) ರವರು (ಎಲ್‌ಪಿ ಸಂಖ್ಯೆ. 1216/05–06) ದಿನಾಂಕ: 21/05/2006 ರಂದು ನಕ್ಷೆ ಮಂಜೂರಾತಿಯನ್ನು ನೀಡಿರುತ್ತಾರೆಂದು, ನಿರ್ಮಾಣ ಕಾರ್ಯವು ಪ್ರಗತಿಯಲ್ಲಿದ್ದು, ನಿರ್ಮಾಣವನ್ನು ಮಂಜೂರಾತಿ ನಕ್ಷೆಯೊಂದಿಗೆ ಹೋಲಿಸಿದಾಗ ನಡುಜಾಗಗಳನ್ನು ಕಡಿಮೆ ಬಿಟ್ಟಿದ್ದು, (ಉಲ್ಲಂಘನೆ ಶೇ 49.44% ರಷ್ಟು) ಮತ್ತು ಸ್ಟಿಲ್ಟ್ ಬದಲು ಬೇಸ್‌ಮೆಂಟನ್ನು ನಿರ್ಮಿಸಿರುತ್ತಾರೆಂದು ಹಾಗೂ ಪ್ರಾರಂಭಿಕ ಮತ್ತು ಸ್ವಾಧೀನಾನುಭವ ಪ್ರಮಾಣ ಪತ್ರಗಳನ್ನು ಈ ಕಟ್ಟಡಕ್ಕೆ ಪಡೆದಿರುವುದಿಲ್ಲವೆಂದು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

ಸದರಿ ಕಟ್ಟಡವನ್ನು ಮಂಜೂರಾತಿ ನಕ್ಷೆಯಂತೆ ನಿರ್ಮಾಣ ಮಾಡದೇ ಕಟ್ಟಡ ಉಪವಿಧಿಗಳ ಉಲ್ಲಂಘನೆ ಮಾಡಿರುವುದರಿಂದ, ಈ ಕಟ್ಟಡಕ್ಕೆ ವಿದ್ಯುತ್ ಸಂಪರ್ಕ ನೀಡದಂತೆ ಕ್ರಮ ವಹಿಸಲು ತಿಳಿಸಿದೆ.

S. Prabhakar 1/9/2008
ಅಧೀಕ್ಷಕ ಅಭಿಯಂತರರು
ತಾಂತ್ರಿಕ ಹಾಗೂ ಜಾಗೃತ ಕೋಶ

1. ಪ್ರತಿಯನ್ನು ಮಾನ್ಯ ಆಯುಕ್ತರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಪ್ರತಿಯನ್ನು ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ಯಶವಂತಪುರ) ರವರಿಗೆ ಕಳುಹಿಸುತ್ತಾ ಸದರಿ ಕಟ್ಟಡದಲ್ಲಿನ ಅನಧಿಕೃತ ನಿರ್ಮಾಣ/ಕಟ್ಟಡದ ಉಪವಿಧಿಗಳಿಗೆ ವ್ಯತಿರಿಕ್ತವಾಗಿ ನಿರ್ಮಿಸಿರುವ ಭಾಗಗಳನ್ನು ತೆರವುಗೊಳಿಸಲು ಕೆ.ಎಂ.ಸಿ. ಕಾಯ್ದೆ 1976 ಅನ್ವಯ ತೆಗೆದುಕೊಂಡ ಕ್ರಮಗಳ ಬಗೆಗಿನ ದಾಖಲೆಗಳನ್ನು ವಿವರವಾದ ವರದಿಯೊಂದಿಗೆ ಸಲ್ಲಿಸಲು ಸೂಚಿಸಿದೆ.

MF

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆಃ ಅಅ/ಟಿ.ವಿ.ಸಿ.ಸಿ./ಜಿಎಲ್/105/08–09

ಅಧೀಕ್ಷಕ ಅಭಿಯಂತರರ ಕಛೇರಿ,
ತಾಂತ್ರಿಕ ಹಾಗೂ ಜಾಗೃತಾ ಕೋಶ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು. ದಿನಾಂಕಃ 11/09/2008.

ರವರಿಗೆ,
ಕಾರ್ಯನಿರ್ವಾಹಕ ಇಂಜಿನಿಯರ್ (ವಿ),
ಅಧಿಕ ಉತ್ತರ ವಲಯ, ಬೆಸ್ಕಾಂ,
ಪೀಣ್ಯ ಬೆಂಗಳೂರು–58.

ವಿಷಯ: ವಾರ್ಡ್ ಸಂಖ್ಯೆ–14ರ ವೆಸ್ಟ್ ಅಫ್ ಕಾರ್ಡ್ ರಸ್ತೆಯ, 2ನೇ ಹಂತದ ಸ್ವತ್ತಿನ ಸಂಖ್ಯೆ–561ರಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ನೀಡುವ ಬಗ್ಗೆ.

ಉಲ್ಲೇಖ: No. EEE/ANDP/AEE(O)/F-9/3778-80 ದಿನಾಂಕ: 04/09/2008.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ಸ್ವತ್ತಿನ ಸಂಖ್ಯೆ–561ರಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ಕಲ್ಪಿಸುವ ಸಲುವಾಗಿ ಲಗತ್ತಿಸಿರುವ ಜೆರಾಕ್ಸ್ ಪ್ರತಿಯ ನಕ್ಷೆಯನ್ನು ಪರಿಶೀಲಿಸಿ ಮಂಜೂರಾಗಿರುವ ಬಗ್ಗೆ ಮಾಹಿತಿ ನೀಡಲು ಕೋರಿರುತ್ತೀರಿ. ಉಲ್ಲೇಖಿತ ಪತ್ರವು ದಿನಾಂಕ: 05/09/2008 ರಂದು ಈ ಕಛೇರಿಯಲ್ಲಿ ಸ್ವೀಕೃತಗೊಂಡಿರುತ್ತದೆ.

ಸದರಿ ಸ್ವತ್ತಿನಲ್ಲಿನ ಕಟ್ಟಡವನ್ನು ದಿನಾಂಕ: 10/09/2008 ರಂದು ಈ ವಿಭಾಗದ ಕಾರ್ಯಪಾಲಕ ಇಂಜಿನಿಯರ್ (ಟಿ.ವಿ.ಸಿ.ಸಿ.–ಪಶ್ಚಿಮ) ರವರು ಪರಿವೀಕ್ಷಿಸಿರುತ್ತಾರೆ. ಸದರಿ ಸ್ವತ್ತಿನಲ್ಲಿ ನಿರ್ಮಾಣಗೊಂಡಿದ್ದ ಬೇಸ್‌ಮೆಂಟ್, ನೆಲ ಅಂತಸ್ತು ಮತ್ತು ಭಾಗಶಃ ನಿರ್ಮಾಣಗೊಂಡಿದ್ದ ಮೊದಲನೇಯ ಅಂತಸ್ತಿನಲ್ಲಿ ಹೆಚ್ಚುವರಿಯಾಗಿ ಕಟ್ಟಡ ನಿರ್ಮಾಣ ಮಾಡಲು ಪಾಲಿಕೆಯ ಕಾರ್ಯಪಾಲಕ ಅಭಿಯಂತರರು (ಪಶ್ಚಿಮ) ರವರು (ಎಲ್‌ಪಿ ಸಂಖ್ಯೆ. 221/95–96) ದಿನಾಂಕ: 11/07/1996 ರಂದು ನಕ್ಷೆ ಮಂಜೂರಾತಿಯನ್ನು ನೀಡಿರುವುದಾಗಿ, ಬೇಸ್‌ಮೆಂಟ್, ನೆಲ ಮತ್ತು ಮೊದಲನೇಯ ಅಂತಸ್ತನ್ನು ನರ್ಸಿಂಗ್‌ಹೋಮ್ ಉಪಯೋಗಕ್ಕಾಗಿ ಬಳಸುತ್ತಿರುವುದಾಗಿ, ಅನಧಿಕೃತವಾಗಿ ಎರಡನೇಯ ಅಂತಸ್ತನ್ನು ನಿರ್ಮಾಣ ಮಾಡುತ್ತಿರುವುದಾಗಿ ವರದಿ ನೀಡಿರುತ್ತಾರೆ. ನಿರ್ಮಾಣವನ್ನು ಮಂಜೂರಾತಿ ನಕ್ಷೆಯೊಂದಿಗೆ ಹೋಲಿಸಿದಾಗ ಕಟ್ಟಡದ ಮುಂಭಾಗದ ಮತ್ತು ಎಡಭಾಗದ ನಡುಜಾಗಗಳನ್ನು ಕಡಿಮೆ ಬಿಟ್ಟಿದ್ದು, ಉಲ್ಲಂಘನೆ ಕ್ರಮವಾಗಿ ಸರಾಸರಿ ಶೇ 21.31 ಮತ್ತು ಶೇ 17.58 ರಷ್ಟು ಆಗಿರುತ್ತದೆಂದು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

ಸದರಿ ಕಟ್ಟಡವನ್ನು ಮಂಜೂರಾತಿ ನಕ್ಷೆಯಂತೆ ನಿರ್ಮಾಣ ಮಾಡದೇ ಕಟ್ಟಡ ಉಪವಿಧಿಗಳ ಉಲ್ಲಂಘನೆ ಮಾಡಿರುವುದರಿಂದ, ಈ ಕಟ್ಟಡಕ್ಕೆ ವಿದ್ಯುತ್ ಸಂಪರ್ಕ ನೀಡದಂತೆ ಕ್ರಮ ವಹಿಸಲು ತಿಳಿಸಿದೆ.

S. Thoraschuhan 11/9/08
ಅಧೀಕ್ಷಕ ಅಭಿಯಂತರರು
ತಾಂತ್ರಿಕ ಹಾಗೂ ಜಾಗೃತ ಕೋಶ

12/9/2008

1. ಪ್ರತಿಯನ್ನು ಮಾನ್ಯ ಆಯುಕ್ತರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಪ್ರತಿಯನ್ನು ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ಗಾಯಿತ್ರಿನಗರ) ರವರಿಗೆ ಕಳುಹಿಸುತ್ತಾ ಸದರಿ ಕಟ್ಟಡದಲ್ಲಿನ ಅನಧಿಕೃತ ನಿರ್ಮಾಣ/ಕಟ್ಟಡದ ಉಪವಿಧಿಗಳಿಗೆ ವ್ಯತಿರಿಕ್ತವಾಗಿ ನಿರ್ಮಿಸಿರುವ ಭಾಗಗಳನ್ನು ತೆರವುಗೊಳಿಸಲು ಕೆ.ಎಂ.ಸಿ. ಕಾಯ್ದೆ 1976 ಅನ್ವಯ ತೆಗೆದುಕೊಂಡ ಕ್ರಮಗಳ ಬಗೆಗಿನ ದಾಖಲೆಗಳನ್ನು ವಿವರವಾದ ವರದಿಯೊಂದಿಗೆ ಸಲ್ಲಿಸಲು ಸೂಚಿಸಿದೆ.

MF

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆಃ ಅಅ/ಟಿ.ವಿ.ಸಿ.ಸಿ./ಜಿಎಲ್/104/08–09

ಅಧೀಕ್ಷಕ ಅಭಿಯಂತರರ ಕಛೇರಿ,
ತಾಂತ್ರಿಕ ಹಾಗೂ ಜಾಗೃತಾ ಕೋಶ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು. ದಿನಾಂಕಃ 11/09/2008.

ರವರಿಗೆ,
ಕಾರ್ಯನಿರ್ವಾಹಕ ಇಂಜಿನಿಯರ್ (ವಿ),
ಅಧಿಕ ಉತ್ತರ ವಲಯ, ಬೆಸ್ಕಾಂ,
ಪೀಣ್ಯ ಬೆಂಗಳೂರು–58.

ವಿಷಯ: ವಾರ್ಡ್ ಸಂಖ್ಯೆ–12ರ ನಂದಿನಿ ಡಾಲರ್ ಸ್ಕೀಂನ್ಸ್, ನಂದಿನಿ ಲೇಔಟ್ ಸ್ವತ್ತಿನ ಸಂಖ್ಯೆ–88ರಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ನೀಡುವ ಬಗ್ಗೆ.

ಉಲ್ಲೇಖ: No. EEE/ANDP/AEE(O)/F-9/3775-77 ದಿನಾಂಕ: 04/09/2008.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ಸ್ವತ್ತಿನ ಸಂಖ್ಯೆ–88ರಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ಕಲ್ಪಿಸುವ ಸಲುವಾಗಿ ಲಗತ್ತಿಸಿರುವ ಜೆರಾಕ್ಸ್ ಪ್ರತಿಯ ನಕ್ಷೆಯನ್ನು ಪರಿಶೀಲಿಸಿ ಮಂಜೂರಾಗಿರುವ ಬಗ್ಗೆ ಮಾಹಿತಿ ನೀಡಲು ಕೋರಿರುತ್ತೀರಿ. ಉಲ್ಲೇಖಿತ ಪತ್ರವು ದಿನಾಂಕ: 05/09/2008 ರಂದು ಈ ಕಛೇರಿಯಲ್ಲಿ ಸ್ವೀಕೃತಗೊಂಡಿರುತ್ತದೆ.

ಸದರಿ ಸ್ವತ್ತಿನಲ್ಲಿನ ಕಟ್ಟಡವನ್ನು ದಿನಾಂಕ: 10/09/2008 ರಂದು ಈ ವಿಭಾಗದ ಕಾರ್ಯಪಾಲಕ ಇಂಜಿನಿಯರ್ (ಟಿ.ವಿ.ಸಿ.ಸಿ.–ಪಶ್ಚಿಮ) ರವರು ಪರಿವೀಕ್ಷಿಸಿರುತ್ತಾರೆ. ಸದರಿ ಸ್ವತ್ತಿನಲ್ಲಿ ವಸತಿ ಅಪಾರ್ಟ್‌ಮೆಂಟ್ ಉಪಯೋಗಕ್ಕಾಗಿ ಸ್ಟಿಲ್ಟ್, ನೆಲ ಮತ್ತು ಎರಡು ಮೇಲು ಅಂತಸ್ತುಗಳ ಜೊತೆಗೆ ಟೆರೇಸ್ ಪ್ಲೋರ್‌ನೊಳ್ಳಗೊಂಡಂತೆ ಕಟ್ಟಡವನ್ನು ನಿರ್ಮಿಸಲು ಪಾಲಿಕೆಯ ಜಂಟಿ ಆಯುಕ್ತರು (ಪಶ್ಚಿಮ) ರವರು (ಎಲ್‌ಪಿ ಸಂಖ್ಯೆ. 940/05–06) ದಿನಾಂಕ: 12/10/2007 ರಂದು ನಕ್ಷೆ ಮಂಜೂರಾತಿಯನ್ನು ನೀಡಿರುತ್ತಾರೆಂದು, ನಿರ್ಮಾಣ ಕಾರ್ಯವು ಪೂರ್ಣಗೊಳ್ಳುವ ಹಂತದಲ್ಲಿದ್ದು, ನಿರ್ಮಾಣವನ್ನು ಮಂಜೂರಾತಿ ನಕ್ಷೆಯೊಂದಿಗೆ ಹೋಲಿಸಿದಾಗ ನಡುಜಾಗಗಳನ್ನು ಕಡಿಮೆ ಬಿಟ್ಟಿದ್ದು, (ಉಲ್ಲಂಘನೆ ಶೇ 3.75 ರಷ್ಟು) ಮತ್ತು ಮೂರನೇಯ ಅಂತಸ್ತನ್ನು ಅನಧಿಕೃತವಾಗಿ ನಿರ್ಮಿಸಿರುತ್ತಾರೆಂದು ಮತ್ತು ಸ್ವಾಧೀನಾನುಭವ ಪ್ರಮಾಣ ಪತ್ರವನ್ನು ಈ ಕಟ್ಟಡಕ್ಕೆ ಪಡೆದಿರುವುದಿಲ್ಲವೆಂದು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

ಸದರಿ ಕಟ್ಟಡವನ್ನು ಮಂಜೂರಾತಿ ನಕ್ಷೆಯಂತೆ ನಿರ್ಮಾಣ ಮಾಡದೇ ಕಟ್ಟಡ ಉಪವಿಧಿಗಳ ಉಲ್ಲಂಘನೆ ಮಾಡಿರುವುದರಿಂದ, ಈ ಕಟ್ಟಡಕ್ಕೆ ವಿದ್ಯುತ್ ಸಂಪರ್ಕ ನೀಡದಂತೆ ಕ್ರಮ ವಹಿಸಲು ತಿಳಿಸಿದೆ.

S. Prashanth 11/9/08
ಅಧೀಕ್ಷಕ ಅಭಿಯಂತರರು
ತಾಂತ್ರಿಕ ಹಾಗೂ ಜಾಗೃತ ಕೋಶ

1. ಪ್ರತಿಯನ್ನು ಮಾನ್ಯ ಆಯುಕ್ತರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಪ್ರತಿಯನ್ನು ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ಮಹಾಲಕ್ಷ್ಮಿಪುರ) ರವರಿಗೆ ಕಳುಹಿಸುತ್ತಾ ಸದರಿ ಕಟ್ಟಡದಲ್ಲಿನ ಅನಧಿಕೃತ ನಿರ್ಮಾಣ/ಕಟ್ಟಡದ ಉಪವಿಧಿಗಳಿಗೆ ವ್ಯತಿರಿಕ್ತವಾಗಿ ನಿರ್ಮಿಸಿರುವ ಭಾಗಗಳನ್ನು ತೆರವುಗೊಳಿಸಲು ಕೆ.ಎಂ.ಸಿ. ಕಾಯ್ದೆ 1976 ಅನ್ವಯ ತೆಗೆದುಕೊಂಡ ಕ್ರಮಗಳ ಬಗೆಗಿನ ದಾಖಲೆಗಳನ್ನು ವಿವರವಾದ ವರದಿಯೊಂದಿಗೆ ಸಲ್ಲಿಸಲು ಸೂಚಿಸಿದೆ.

MF

12/9/2008

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆಃ ಅಅ/ಟಿ.ವಿ.ಸಿ.ಸಿ./ಜಿಎಲ್/100/08–09

ಅಧೀಕ್ಷಕ ಅಭಿಯಂತರರ ಕಛೇರಿ,
ತಾಂತ್ರಿಕ ಹಾಗೂ ಜಾಗೃತಾ ಕೋಶ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು. ದಿನಾಂಕಃ 15/09/2008.

ರವರಿಗೆ,
ಕಾರ್ಯನಿರ್ವಾಹಕ ಇಂಜಿನಿಯರ್ (ವಿ),
(ವಾ. ಕಾ ಮತ್ತು ಪ) ರವರ ಕಛೇರಿ
ಉತ್ತರ ವಿಭಾಗ, ಬೆ.ವಿ.ಕಂ.,
ರಾಜಾಜಿನಗರ ಬೆಂಗಳೂರು–10.

ವಿಷಯ: ವಾರ್ಡ್ ಸಂಖ್ಯೆ–19ರ ಬಸವೇಶ್ವರನಗರದ, 3ನೇ ಹಂತದ, 2ನೇ ಬ್ಲಾಕ್ ಸ್ವತ್ತಿನ ಸಂಖ್ಯೆ–220 ರಲ್ಲಿನ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ನೀಡುವ ಬಗ್ಗೆ.

ಉಲ್ಲೇಖ: ಸಂ–ಕಾನಿಇಂ(ವಿ)/ಉವಿ/ಸಕಾಇಂ(ಕ)/3950–52 ದಿನಾಂಕ: 02/09/2008.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ಸ್ವತ್ತಿನ ಸಂಖ್ಯೆ–220 ರಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ಕಲ್ಪಿಸುವ ಸಲುವಾಗಿ ಸಲ್ಲಿಸಿರುವ ನೀಲಿ ನಕ್ಷೆಯ ಮಂಜೂರಾತಿಯ ಬಗ್ಗೆ ಪರಿಶೀಲಿಸಿ ಧೃಡೀಕರಿಸಬೇಕಾಗಿ ಕೋರಿರುತ್ತೀರಿ. ಉಲ್ಲೇಖಿತ ಪತ್ರವು ದಿನಾಂಕ: 4/9/2008 ರಂದು ಈ ಕಛೇರಿಯಲ್ಲಿ ಸ್ವೀಕೃತಗೊಂಡಿರುತ್ತದೆ.

ಸದರಿ ಸ್ವತ್ತಿನಲ್ಲಿನ ಕಟ್ಟಡವನ್ನು ದಿನಾಂಕ: 06/09/2008 ರಂದು ಈ ವಿಭಾಗದ ಕಾರ್ಯಪಾಲಕ ಇಂಜಿನಿಯರ್ (ಟಿ.ವಿ.ಸಿ.ಸಿ.–ಪಶ್ಚಿಮ) ರವರು ಪರಿವೀಕ್ಷಿಸಿರುತ್ತಾರೆ. ಸದರಿ ಸ್ವತ್ತಿನಲ್ಲಿ ವಸತಿ ಮತ್ತು ವಾಣಿಜ್ಯ ಉಪಯೋಗಕ್ಕಾಗಿ ಸ್ಟಿಲ್ಟ್, ನೆಲ ಮತ್ತು ಎರಡು ಮೇಲು ಅಂತಸ್ತುಗಳ ಜೊತೆಗೆ ಟೆರೇಸ್ ಪ್ಲೋರ್ ಕಟ್ಟಡವನ್ನು ನಿರ್ಮಿಸಲು, ಪಾಲಿಕೆಯ ಜಂಟಿ ಆಯುಕ್ತರು (ಪಶ್ಚಿಮ) ರವರು (ಎಲ್‌ಪಿ ಸಂಖ್ಯೆ. 1227/05–06) ದಿನಾಂಕ: 12/10/2007 ರಂದು ಮಾರ್ಪಾಡು ನಕ್ಷೆ ಮಂಜೂರಾತಿಯನ್ನು ನೀಡಿರುತ್ತಾರೆಂದು ನಿರ್ಮಾಣ ಕಾರ್ಯವು ಪ್ರಗತಿಯಲ್ಲಿರುತ್ತದೆ ಎಂದು, ನಿರ್ಮಾಣವನ್ನು ಮಂಜೂರಾತಿ ನಕ್ಷೆಯೊಂದಿಗೆ ಹೋಲಿಸಿದಾಗ ನಡುಜಾಗಗಳನ್ನು ಕಡಿಮೆ ಬಿಟ್ಟಿದ್ದು, (ಉಲ್ಲಂಘನೆ ಸರಾಸರಿ ಶೇ 10.11 ರಷ್ಟು) ಮತ್ತು ಎಲ್ಲಾ ಅಂತಸ್ತುಗಳ ರೂಫ್ ಸ್ಲ್ಯಾಬ್‌ನ್ನು ನಡುಜಾಗಕ್ಕೆ ಚಾಚಿರುವುದಾಗಿ ಹಾಗೂ ಕಟ್ಟಡಕ್ಕೆ ಪ್ರಾರಂಭಿಕ ಮತ್ತು ಸ್ವಾಧೀನಾನುಭವ ಪ್ರಮಾಣ ಪತ್ರಗಳನ್ನು ಪಡೆದಿರುವುದಿಲ್ಲವೆಂದು ವರದಿ ಮಾಡಿರುತ್ತಾರೆ.

ಸದರಿ ಕಟ್ಟಡವನ್ನು ಮಂಜೂರಾತಿ ನಕ್ಷೆಯಂತೆ ನಿರ್ಮಾಣ ಮಾಡದೇ ಕಟ್ಟಡ ಉಪವಿಧಿಗಳ ಉಲ್ಲಂಘನೆ ಮಾಡಿರುವುದರಿಂದ, ಈ ಕಟ್ಟಡಕ್ಕೆ ವಿದ್ಯುತ್ ಸಂಪರ್ಕ ನೀಡದಂತೆ ಕ್ರಮ ವಹಿಸಲು ತಿಳಿಸಿದೆ.

S. Prabhakar 15/9/08
ಅಧೀಕ್ಷಕ ಅಭಿಯಂತರರು
ತಾಂತ್ರಿಕ ಹಾಗೂ ಜಾಗೃತ ಕೋಶ

15/9/08
16.9.08

1. ಪ್ರತಿಯನ್ನು ಮಾನ್ಯ ಆಯುಕ್ತರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಪ್ರತಿಯನ್ನು ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ರಾಜಾಜಿನಗರ) ರವರಿಗೆ ಕಳುಹಿಸುತ್ತಾ ಸದರಿ ಕಟ್ಟಡದಲ್ಲಿನ ಅನಧಿಕೃತ ನಿರ್ಮಾಣ/ಕಟ್ಟಡದ ಉಪವಿಧಿಗಳಿಗೆ ವ್ಯತಿರಿಕ್ತವಾಗಿ ನಿರ್ಮಿಸಿರುವ ಭಾಗಗಳನ್ನು ತೆರವುಗೊಳಿಸಲು ಕೆ.ಎಂ.ಸಿ. ಕಾಯ್ದೆ 1976 ಅನ್ವಯ ತೆಗೆದುಕೊಂಡ ಕ್ರಮಗಳ ಬಗೆಗಿನ ದಾಖಲೆಗಳನ್ನು ವಿವರವಾದ ವರದಿಯೊಂದಿಗೆ ಸಲ್ಲಿಸಲು ಸೂಚಿಸಿದೆ.

MF

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆಃ ಅಅ/ಟಿ.ವಿ.ಸಿ.ಸಿ./ಜಿಎಲ್/103/08–09

ಅಧೀಕ್ಷಕ ಅಭಿಯಂತರರ ಕಛೇರಿ,
ತಾಂತ್ರಿಕ ಹಾಗೂ ಜಾಗೃತಾ ಕೋಶ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು. ದಿನಾಂಕಃ 16/09/2008.

ರವರಿಗೆ,
ಕಾರ್ಯನಿರ್ವಾಹಕ ಇಂಜಿನಿಯರ್ (ವಿ),
ಅಧಿಕ ಉತ್ತರ ವಲಯ, ಬೆಸ್ಕಾಂ,
ಪೀಣ್ಯ ಬೆಂಗಳೂರು–58.

ವಿಷಯ: ವಾರ್ಡ್ ಸಂಖ್ಯೆ–12ರ ಪರಿಮಳ ನಗರ, 10ನೇ ಕ್ರಾಸಿನ ಸ್ವತ್ತಿನ ಸಂಖ್ಯೆ–24/6/5 ಮತ್ತು ಸ್ವತ್ತಿನ ಸಂಖ್ಯೆ–21/9–1ರಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ನೀಡುವ ಬಗ್ಗೆ.

ಉಲ್ಲೇಖ: No. EEE/ANDP/AEE(O)/F-9/3770-72 ದಿನಾಂಕ: 04/09/2008.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ಸ್ವತ್ತಿನ ಸಂಖ್ಯೆ–24/6/5 ಮತ್ತು ಸ್ವತ್ತಿನ ಸಂಖ್ಯೆ–21/9–1 ರಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ಕಲ್ಪಿಸುವ ಸಲುವಾಗಿ ಲಗತ್ತಿಸಿರುವ ಜೆರಾಕ್ಸ್ ಪ್ರತಿಯ ನಕ್ಷೆಯನ್ನು ಪರಿಶೀಲಿಸಿ ಮಂಜೂರಾಗಿರುವ ಬಗ್ಗೆ ಮಾಹಿತಿ ನೀಡಲು ಕೋರಿರುತ್ತೀರಿ. ಉಲ್ಲೇಖಿತ ಪತ್ರವು ದಿನಾಂಕ: 05/09/2008 ರಂದು ಈ ಕಛೇರಿಯಲ್ಲಿ ಸ್ವೀಕೃತಗೊಂಡಿರುತ್ತದೆ.

ಸದರಿ ಸ್ವತ್ತಿನಲ್ಲಿನ ಕಟ್ಟಡಗಳನ್ನು ದಿನಾಂಕ: 10/09/2008 ರಂದು ಈ ವಿಭಾಗದ ಕಾರ್ಯಪಾಲಕ ಇಂಜಿನಿಯರ್ (ಟಿ.ವಿ.ಸಿ.ಸಿ.–ಪಶ್ಚಿಮ) ರವರು ಪರಿವೀಕ್ಷಿಸಿರುತ್ತಾರೆ.

ಸ್ವತ್ತಿನ ಸಂಖ್ಯೆ–24/6/5:– ಸದರಿ ಸ್ವತ್ತಿನಲ್ಲಿ ವಸತಿ ಉಪಯೋಗಕ್ಕಾಗಿ ನೆಲ ಮತ್ತು ಮೊದಲನೇಯ ಅಂತಸ್ತುಳ್ಳ ಕಟ್ಟಡವನ್ನು ನಿರ್ಮಿಸಲು ಪಾಲಿಕೆಯ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ಮಹಾಲಕ್ಷ್ಮೀಪುರ) ರವರು ರವರು (ಎಲ್‌ಪಿ ಸಂಖ್ಯೆ. 112/05–06) ದಿನಾಂಕ:19/07/2005 ರಂದು ನಕ್ಷೆ ಮಂಜೂರಾತಿಯನ್ನು ನೀಡಿರುತ್ತಾರೆಂದು, ನಿರ್ಮಾಣ ಕಾರ್ಯವು ಪೂರ್ಣಗೊಳ್ಳುವ ಹಂತದಲ್ಲಿದ್ದು, ನಿರ್ಮಾಣವನ್ನು ಮಂಜೂರಾತಿ ನಕ್ಷೆಯೊಂದಿಗೆ ಹೋಲಿಸಿದಾಗ ನಡುಜಾಗಗಳನ್ನು ಕಡಿಮೆ ಬಿಟ್ಟಿದ್ದು (ಉಲ್ಲಂಘನೆ ಶೇ 100 ರಷ್ಟು) ಮತ್ತು ಬೇಸ್‌ಮೆಂಟ್, ಎರಡನೇಯ ಹಾಗೂ ಭಾಗಶಃ ಟೆರೇಸ್ ಅಂತಸ್ತನ್ನು ಅನಧಿಕೃತವಾಗಿ ನಿರ್ಮಿಸಿರುತ್ತಾರೆಂದು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

ಸ್ವತ್ತಿನ ಸಂಖ್ಯೆ–21/9–1:– ಸದರಿ ಸ್ವತ್ತಿನಲ್ಲಿ ವಸತಿ ಉಪಯೋಗಕ್ಕಾಗಿ ನೆಲ ಮತ್ತು ಮೊದಲನೇಯ ಅಂತಸ್ತುಳ್ಳ ಕಟ್ಟಡವನ್ನು ನಿರ್ಮಿಸಲು ಪಾಲಿಕೆಯ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ಮಹಾಲಕ್ಷ್ಮೀಪುರ) ರವರು ರವರು (ಎಲ್‌ಪಿ ಸಂಖ್ಯೆ. 113/05–06) ದಿನಾಂಕ:19/07/2005 ರಂದು ನಕ್ಷೆ ಮಂಜೂರಾತಿಯನ್ನು ನೀಡಿರುತ್ತಾರೆಂದು, ನಿರ್ಮಾಣ ಕಾರ್ಯವು ಪೂರ್ಣಗೊಂಡಿದ್ದು, ನಿರ್ಮಾಣವನ್ನು ಮಂಜೂರಾತಿ ನಕ್ಷೆಯೊಂದಿಗೆ ಹೋಲಿಸಿದಾಗ ನಡುಜಾಗಗಳನ್ನು ಕಡಿಮೆ ಬಿಟ್ಟಿದ್ದು (ಉಲ್ಲಂಘನೆ ಶೇ 100 ರಷ್ಟು) ಮತ್ತು ಬೇಸ್‌ಮೆಂಟ್, ಎರಡನೇಯ ಹಾಗೂ ಭಾಗಶಃ ಟೆರೇಸ್ ಅಂತಸ್ತನ್ನು ಅನಧಿಕೃತವಾಗಿ ನಿರ್ಮಿಸಿರುತ್ತಾರೆಂದು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

ಸದರಿ ಕಟ್ಟಡಗಳನ್ನು ಮಂಜೂರಾತಿ ನಕ್ಷೆಯಂತೆ ನಿರ್ಮಾಣ ಮಾಡದೇ ಕಟ್ಟಡ ಉಪವಿಧಿಗಳ ಉಲ್ಲಂಘನೆ ಮಾಡಿರುವುದರಿಂದ, ಈ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ನೀಡದಂತೆ ಕ್ರಮ ವಹಿಸಲು ತಿಳಿಸಿದೆ.

ಅಧೀಕ್ಷಕ ಅಭಿಯಂತರರು
ತಾಂತ್ರಿಕ ಹಾಗೂ ಜಾಗೃತ ಕೋಶ

ಬಿ.ಬಿ.ಎಂ.ಪಿ.ನಿ
ಬಿದಲೊಂಬೆ
ಕ್ರಮ ಸಂಖ್ಯೆ 17/9/08
ದಿನಾಂಕ

1. ಪ್ರತಿಯನ್ನು ಮಾನ್ಯ ಆಯುಕ್ತರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಪ್ರತಿಯನ್ನು ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ಮಹಾಲಕ್ಷ್ಮೀಪುರ) ರವರಿಗೆ ಕಳುಹಿಸುತ್ತಾ ಸದರಿ ಕಟ್ಟಡದಲ್ಲಿನ ಅನಧಿಕೃತ ನಿರ್ಮಾಣ/ಕಟ್ಟಡದ ಉಪವಿಧಿಗಳಿಗೆ ವ್ಯತಿರಿಕ್ತವಾಗಿ ನಿರ್ಮಿಸಿರುವ ಭಾಗಗಳನ್ನು ತೆರವುಗೊಳಿಸಲು ಕೆ.ಎಂ.ಸಿ. ಕಾಯ್ದೆ 1976 ಅನ್ವಯ ತೆಗೆದುಕೊಂಡ ಕ್ರಮಗಳ ಬಗೆಗಿನ ದಾಖಲೆಗಳನ್ನು ವಿವರವಾದ ವರದಿಯೊಂದಿಗೆ ಸಲ್ಲಿಸಲು ಸೂಚಿಸಿದೆ.

MF

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆಃ ಅಅ/ಟಿ.ವಿ.ಸಿ.ಸಿ./ಜಿಎಲ್/135/08–09

ಅಧೀಕ್ಷಕ ಅಭಿಯಂತರರ ಕಛೇರಿ,
ತಾಂತ್ರಿಕ ಹಾಗೂ ಜಾಗೃತಾ ಕೋಶ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು. ದಿನಾಂಕಃ 22/09/2008.

ರವರಿಗೆ,
ಕಾರ್ಯನಿರ್ವಾಹಕ ಇಂಜಿನಿಯರ್ (ವಿ),
(ವಾ. ಕಾ ಮತ್ತು ಪ) ರವರ ಕಛೇರಿ
ಉತ್ತರ ವಿಭಾಗ, ಬೆ.ವಿ.ಕಂ.,
ರಾಜಾಜಿನಗರ ಬೆಂಗಳೂರು–10.

ವಿಷಯ: ವಾರ್ಡ್ ಸಂಖ್ಯೆ–18ರ ಕಾವೇರಿನಗರ, ಎಚ್.ಬಿ.ಸಿ.ಎಸ್‌ಲೇಔಟ್, ಸ್ವತ್ತಿನ ಸಂಖ್ಯೆ–26ರಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ನೀಡುವ ಬಗ್ಗೆ.

ಉಲ್ಲೇಖ: ಸಂ–ಕಾನಿಇಂ(ವಿ)/ಉವಿ/ಸಕಾಇಂ(ಕ)ಕಿಇಂ1/4211–13 ದಿನಾಂಕ: 09/09/2008.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ಸ್ವತ್ತಿನ ಸಂಖ್ಯೆ–26 ರಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ಕಲ್ಪಿಸುವ ಸಲುವಾಗಿ ಲಗತ್ತಿಸಿರುವ ಜೆರಾಕ್ಸ್ ಪ್ರತಿಯ ನಕ್ಷೆಯನ್ನು ಪರಿಶೀಲಿಸಿ ಮಂಜೂರಾಗಿರುವ ಬಗ್ಗೆ ಮಾಹಿತಿ ನೀಡಲು ಕೋರಿರುತ್ತೀರಿ. ಉಲ್ಲೇಖಿತ ಪತ್ರವು ದಿನಾಂಕ: 11/09/2008 ರಂದು ಈ ಕಛೇರಿಯಲ್ಲಿ ಸ್ವೀಕೃತಗೊಂಡಿರುತ್ತದೆ.

ಸದರಿ ಸ್ವತ್ತಿನಲ್ಲಿನ ಕಟ್ಟಡವನ್ನು ದಿನಾಂಕ: 15/09/2008 ರಂದು ಈ ವಿಭಾಗದ ಕಾರ್ಯಪಾಲಕ ಇಂಜಿನಿಯರ್ (ಟಿ.ವಿ.ಸಿ.ಸಿ.–(ಪಶ್ಚಿಮ) ರವರು ಪರಿವೀಕ್ಷಿಸಿರುತ್ತಾರೆ. ಸದರಿ ಸ್ವತ್ತಿನಲ್ಲಿ ವಸತಿ ಅಪಾರ್ಟ್‌ಮೆಂಟ್ ಉಪಯೋಗಕ್ಕಾಗಿ ಸ್ಟಿಲ್ಟ್, ನೆಲ ಮತ್ತು ಎರಡು ಮೇಲು ಅಂತಸ್ತುಗಳ ಜೊತೆಗೆ ಟೆರೇಸ್ ಪ್ಲೋರ್ ಕಟ್ಟಡವನ್ನು ನಿರ್ಮಿಸಲು, ಪಾಲಿಕೆಯ ಜಂಟಿ ಆಯುಕ್ತರು (ಪಶ್ಚಿಮ) ರವರು (ಎಲ್‌ಪಿ ಸಂಖ್ಯೆ. 620/05–06) ದಿನಾಂಕ: 14/11/2005 ರಂದು ನಕ್ಷೆ ಮಂಜೂರಾತಿಯನ್ನು ನೀಡಿರುತ್ತಾರೆಂದು, ನಿರ್ಮಾಣ ಕಾರ್ಯವು ಪೂರ್ಣಗೊಂಡಿದ್ದು, ನಿರ್ಮಾಣವನ್ನು ಮಂಜೂರಾತಿ ನಕ್ಷೆಯೊಂದಿಗೆ ಹೋಲಿಸಿದಾಗ ನಡುಜಾಗಗಳನ್ನು ಕಡಿಮೆ ಬಿಟ್ಟಿರುವುದಾಗಿ (ಉಲ್ಲಂಘನೆ ಸರಾಸರಿ ಶೇ 47.04 ರಷ್ಟು) ಬೇಸ್‌ಮೆಂಟ್ ಮತ್ತು ಮೂರನೇಯ ಅಂತಸ್ತುಗಳನ್ನು ಅನಧಿಕೃತವಾಗಿ ನಿರ್ಮಿಸಿರುತ್ತಾರೆಂದು ಕಟ್ಟಡದ ಎತ್ತರವನ್ನು ಮಂಜೂರಾದ ನಕ್ಷೆಗಿಂತ ಹೆಚ್ಚಾಗಿ ವಿಸ್ತರಿಸಿರುವುದಾಗಿ, ಕಟ್ಟಡದ ಮುಂಭಾಗದ ಎಡ ಮತ್ತು ಬಲಭಾಗದ ಎಲ್ಲಾ ಅಂತಸ್ತುಗಳ ರೂಫ್ ಸ್ಲ್ಯಾಬ್ ಅನ್ನು ನಡುಜಾಗಗಳಿಗೆ ಮುಂಚಾಚಲಾಗಿರುತ್ತದೆಂದು ಹಾಗೂ ಪ್ರಾರಂಭಿಕ ಮತ್ತು ಸ್ವಾಧೀನಾನುಭವ ಪ್ರಮಾಣ ಪತ್ರಗಳನ್ನು ಈ ಕಟ್ಟಡಕ್ಕೆ ಪಡೆದಿರುವುದಿಲ್ಲವೆಂದು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

ಸದರಿ ಕಟ್ಟಡವನ್ನು ಮಂಜೂರಾತಿ ನಕ್ಷೆಯಂತೆ ನಿರ್ಮಾಣ ಮಾಡದೇ ಕಟ್ಟಡ ಉಪವಿಧಿಗಳ ಉಲ್ಲಂಘನೆ ಮಾಡಿರುವುದರಿಂದ, ಈ ಕಟ್ಟಡಕ್ಕೆ ವಿದ್ಯುತ್ ಸಂಪರ್ಕ ನೀಡದಂತೆ ಕ್ರಮ ವಹಿಸಲು ತಿಳಿಸಿದೆ.

S. Prabhaka 22/9/08
ಅಧೀಕ್ಷಕ ಅಭಿಯಂತರರು
ತಾಂತ್ರಿಕ ಹಾಗೂ ಜಾಗೃತ ಕೋಶ

1. ಪ್ರತಿಯನ್ನು ಮಾನ್ಯ ಆಯುಕ್ತರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಪ್ರತಿಯನ್ನು ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ಶ್ರೀರಾಮಮಂದಿರ) ರವರಿಗೆ ಕಳುಹಿಸುತ್ತಾ ಸದರಿ ಕಟ್ಟಡದಲ್ಲಿನ ಅನಧಿಕೃತ ನಿರ್ಮಾಣ/ಕಟ್ಟಡದ ಉಪವಿಧಿಗಳಿಗೆ ವ್ಯತಿರಿಕ್ತವಾಗಿ ನಿರ್ಮಿಸಿರುವ ಭಾಗಗಳನ್ನು ತೆರವುಗೊಳಿಸಲು ಕೆ.ಎಂ.ಸಿ. ಕಾಯ್ದೆ 1976 ಅನ್ವಯ ತೆಗೆದುಕೊಂಡ ಕ್ರಮಗಳ ಬಗೆಗಿನ ದಾಖಲೆಗಳನ್ನು ವಿವರವಾದ ವರದಿಯೊಂದಿಗೆ ಸಲ್ಲಿಸಲು ಸೂಚಿಸಿದೆ.

MF

ಉತ್ತರ ವಿಭಾಗ, ಬೆಸ್ಕಾಂ
ಸೆಸ್ಟ್ ಬ್ಲಾಕ್ ಕಾರ್ಡ್ ರೋಡ್,
ರಾಜಾಜಿನಗರ, ಬೆಂಗಳೂರು-560 010

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆಃ ಅಅ/ಟಿ.ವಿ.ಸಿ.ಸಿ./ಜಿಎಲ್/133/5/08–09

ಅಧೀಕ್ಷಕ ಅಭಿಯಂತರರ ಕಛೇರಿ,
ತಾಂತ್ರಿಕ ಹಾಗೂ ಜಾಗೃತಾ ಕೋಶ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು. ದಿನಾಂಕಃ 22/09/2008.

ರವರಿಗೆ,
ಕಾರ್ಯನಿರ್ವಾಹಕ ಇಂಜಿನಿಯರ್ (ವಿ),
ವಾ, ಕಾ ಮತ್ತು ಪಾ, ಪಶ್ಚಿಮ ವಿಭಾಗ,
ಬೆ ವಿ ಕಂ, ಕ್ರೆಸೆಂಟ್ ರಸ್ತೆ, ಕ್ರೆಸೆಂಟ್ ಕಟ್ಟಡ,
ಬೆಂಗಳೂರು–01.

ವಿಷಯ: ವಾರ್ಡ್ ಸಂಖ್ಯೆ–48ರ ಸುಧಾಮನಗರ, ಲಾಲ್‌ಬಾಗ್, ಕೋಟೆ ರಸ್ತೆಯ ಸ್ವತ್ತಿನ ಸಂಖ್ಯೆ–29 ರಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ನೀಡುವ ಬಗ್ಗೆ.

ಉಲ್ಲೇಖ: ಕಾನಿಇ(ವಿ)ಪವಿ/ಸ.ಕಇಂ(ವಿ)ಸಇಂ(ವಿ)/08–09/3559 ದಿನಾಂಕ: 10/09/2008.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ಸ್ವತ್ತಿನ ಸಂಖ್ಯೆ–29 ರಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ಕಲ್ಪಿಸುವ ಸಲುವಾಗಿ ಲಗತ್ತಿಸಿರುವ ಜೆರಾಕ್ಸ್ ಪ್ರತಿಯ ನಕ್ಷೆಯನ್ನು ಪರಿಶೀಲಿಸಿ ಮಂಜೂರಾಗಿರುವ ಬಗ್ಗೆ ಮಾಹಿತಿ ನೀಡಲು ಕೋರಿರುತ್ತೀರಿ. ಉಲ್ಲೇಖಿತ ಪತ್ರವು ದಿನಾಂಕ: 10/09/2008 ರಂದು ಈ ಕಛೇರಿಯಲ್ಲಿ ಸ್ವೀಕೃತಗೊಂಡಿರುತ್ತದೆ.

ಸದರಿ ಸ್ವತ್ತಿನಲ್ಲಿನ ಕಟ್ಟಡವನ್ನು ದಿನಾಂಕ: 12/09/2008 ರಂದು ಈ ವಿಭಾಗದ ಕಾರ್ಯಪಾಲಕ ಇಂಜಿನಿಯರ್ (ಟಿ.ವಿ.ಸಿ.ಸಿ.–(ಪಶ್ಚಿಮ) ರವರು ಪರಿವೀಕ್ಷಿಸಿರುತ್ತಾರೆ. ಸದರಿ ಸ್ವತ್ತಿನಲ್ಲಿ ಹಾಸ್ಟೆಲ್ ಉಪಯೋಗಕ್ಕಾಗಿ ಸ್ಟಿಲ್ಟ್, ನೆಲ ಮತ್ತು ಎರಡು ಮೇಲು ಅಂತಸ್ತುಗಳ ಜೊತೆಗೆ ಟೆರೇಸ್ ಪ್ಲೋರ್ ಕಟ್ಟಡವನ್ನು ನಿರ್ಮಿಸಲು, ಪಾಲಿಕೆಯ ಜಂಟಿ ಆಯುಕ್ತರು (ಪಶ್ಚಿಮ) ರವರು (ಎಲ್‌ಪಿ ಸಂಖ್ಯೆ. 250/07–08) ದಿನಾಂಕ: 03/03/2008 ರಂದು ನಕ್ಷೆ ಮಂಜೂರಾತಿಯನ್ನು ನೀಡಿರುತ್ತಾರೆಂದು, ನಿರ್ಮಾಣ ಕಾರ್ಯವು ಪ್ರಗತಿಯಲ್ಲಿದ್ದು, ನಿರ್ಮಾಣವನ್ನು ಮಂಜೂರಾತಿ ನಕ್ಷೆಯೊಂದಿಗೆ ಹೋಲಿಸಿದಾಗ ನಡುಜಾಗಗಳನ್ನು ಕಡಿಮೆ ಬಿಟ್ಟಿರುವುದಾಗಿ (ಉಲ್ಲಂಘನೆ ಶೇ 6.75 ರಷ್ಟು) ಮತ್ತು ಬೇಸ್‌ಮೆಂಟ್, mazanine ಮತ್ತು ಮೂರನೇಯ ಅಂತಸ್ತನ್ನು ಅನಧಿಕೃತವಾಗಿ ನಿರ್ಮಿಸಿರುತ್ತಾರೆಂದು ಮತ್ತು ಟೆರೇಸ್ ಪ್ಲೋರ್‌ನಲ್ಲಿ ಭಾಗಶಃ ಭಾಗವನ್ನು ಉಪಯೋಗಿಸಿ ಅನಧಿಕೃತವಾಗಿ ಕಟ್ಟಡ ನಿರ್ಮಿಸಿರುತ್ತಾರೆಂದು ಹಾಗೂ ಪ್ರಾರಂಭಿಕ ಮತ್ತು ಸ್ವಾಧೀನಾನುಭವ ಪ್ರಮಾಣ ಪತ್ರಗಳನ್ನು ಈ ಕಟ್ಟಡಕ್ಕೆ ಪಡೆದಿರುವುದಿಲ್ಲವೆಂದು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

ಸದರಿ ಕಟ್ಟಡವನ್ನು ಮಂಜೂರಾತಿ ನಕ್ಷೆಯಂತೆ ನಿರ್ಮಾಣ ಮಾಡದೇ ಕಟ್ಟಡ ಉಪವಿಧಿಗಳ ಉಲ್ಲಂಘನೆ ಮಾಡಿರುವುದರಿಂದ, ಈ ಕಟ್ಟಡಕ್ಕೆ ವಿದ್ಯುತ್ ಸಂಪರ್ಕ ನೀಡದಂತೆ ಕ್ರಮ ವಹಿಸಲು ತಿಳಿಸಿದೆ.

22/9/08
ಅಧೀಕ್ಷಕ ಅಭಿಯಂತರರು
ತಾಂತ್ರಿಕ ಹಾಗೂ ಜಾಗೃತ ಕೋಶ

23/9/08
Executive Engineer (Ele.)
BESCOM West Division
Crescent Road, Madhava Nagar
Bangalore - 560 001

1. ಪ್ರತಿಯನ್ನು ಮಾನ್ಯ ಆಯುಕ್ತರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಪ್ರತಿಯನ್ನು ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ಚಾಮರಾಜಪೇಟೆ) ರವರಿಗೆ ಕಳುಹಿಸುತ್ತಾ ಸದರಿ ಕಟ್ಟಡದಲ್ಲಿನ ಅನಧಿಕೃತ ನಿರ್ಮಾಣ/ಕಟ್ಟಡದ ಉಪವಿಧಿಗಳಿಗೆ ವ್ಯತಿರಿಕ್ತವಾಗಿ ನಿರ್ಮಿಸಿರುವ ಭಾಗಗಳನ್ನು ತೆರವುಗೊಳಿಸಲು ಕೆ.ಎಂ.ಸಿ. ಕಾಯ್ದೆ 1976 ಅನ್ವಯ ತೆಗೆದುಕೊಂಡ ಕ್ರಮಗಳ ಬಗೆಗಿನ ದಾಖಲೆಗಳನ್ನು ವಿವರವಾದ ವರದಿಯೊಂದಿಗೆ ಸಲ್ಲಿಸಲು ಸೂಚಿಸಿದೆ.

MF

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆಃ ಅಅ/ಟಿ.ವಿ.ಸಿ.ಸಿ./ಜಿಎಲ್/133/4/08–09

ಅಧೀಕ್ಷಕ ಅಭಿಯಂತರರ ಕಛೇರಿ,
ತಾಂತ್ರಿಕ ಹಾಗೂ ಜಾಗೃತಾ ಕೋಶ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು. ದಿನಾಂಕಃ 22/09/2008.

ರವರಿಗೆ,
ಕಾರ್ಯನಿರ್ವಾಹಕ ಇಂಜಿನಿಯರ್ (ವಿ),
ವಾ, ಕಾ ಮತ್ತು ಪಾ, ಪಶ್ಚಿಮ ವಿಭಾಗ,
ಬೆ ವಿ ಕಂ, ಕ್ರೆಸೆಂಟ್ ರಸ್ತೆ, ಕ್ರೆಸೆಂಟ್ ಕಟ್ಟಡ,
ಬೆಂಗಳೂರು–01.

ವಿಷಯ: ವಾರ್ಡ್ ಸಂಖ್ಯೆ–27ರ ಪಿ.ಎಸ್.ಲೇನ್, 2ನೇ ಕ್ರಾಸ್, ಸ್ವತ್ತಿನ ಸಂಖ್ಯೆ–10ರಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ನೀಡುವ ಬಗ್ಗೆ.

ಉಲ್ಲೇಖ: ಕಾನಿಇ(ವಿ)ಪವಿ/ಸ.ಕಇಂ(ವಿ)ಸಇಂ(ವಿ)/08–09/3559 ದಿನಾಂಕ: 10/09/2008.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ಸ್ವತ್ತಿನ ಸಂಖ್ಯೆ–10ರಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ಕಲ್ಪಿಸುವ ಸಲುವಾಗಿ ಲಗತ್ತಿಸಿರುವ ಜೆರಾಕ್ಸ್ ಪ್ರತಿಯ ನಕ್ಷೆಯನ್ನು ಪರಿಶೀಲಿಸಿ ಮಂಜೂರಾಗಿರುವ ಬಗ್ಗೆ ಮಾಹಿತಿ ನೀಡಲು ಕೋರಿರುತ್ತೀರಿ. ಉಲ್ಲೇಖಿತ ಪತ್ರವು ದಿನಾಂಕ: 10/09/2008 ರಂದು ಈ ಕಛೇರಿಯಲ್ಲಿ ಸ್ವೀಕೃತಗೊಂಡಿರುತ್ತದೆ.

ಸದರಿ ಸ್ವತ್ತಿನಲ್ಲಿನ ಕಟ್ಟಡವನ್ನು ದಿನಾಂಕ: 12/09/2008 ರಂದು ಈ ವಿಭಾಗದ ಕಾರ್ಯಪಾಲಕ ಇಂಜಿನಿಯರ್ (ಟಿ.ವಿ.ಸಿ.ಸಿ.–(ಪಶ್ಚಿಮ) ರವರು ಪರಿವೀಕ್ಷಿಸಿರುತ್ತಾರೆ. ಸದರಿ ಸ್ವತ್ತಿನಲ್ಲಿ ವಸತಿ ಉಪಯೋಗಕ್ಕಾಗಿ ನೆಲ ಮತ್ತು ಎರಡು ಮೇಲು ಅಂತಸ್ತುಗಳ ಜೊತೆಗೆ ಟೆರೇಸ್ ಪ್ಲೋರ್ ಕಟ್ಟಡವನ್ನು ನಿರ್ಮಿಸಲು ಪಾಲಿಕೆಯ ಜಂಟಿ ಆಯುಕ್ತರು (ಪಶ್ಚಿಮ) ರವರು (ಎಲ್‌ಪಿ ಸಂಖ್ಯೆ. 867/07–08) ದಿನಾಂಕ: 09/08/2007 ರಂದು ನಕ್ಷೆ ಮಂಜೂರಾತಿಯನ್ನು ನೀಡಿರುತ್ತಾರೆಂದು, ನಿರ್ಮಾಣ ಕಾರ್ಯವು ಪ್ರಗತಿಯಲ್ಲಿದ್ದು, ನಿರ್ಮಾಣವನ್ನು ಮಂಜೂರಾತಿ ನಕ್ಷೆಯೊಂದಿಗೆ ಹೋಲಿಸಿದಾಗ ನಡುಜಾಗಗಳನ್ನು ಕಡಿಮೆ ಬಿಟ್ಟಿರುವುದಾಗಿ (ಉಲ್ಲಂಘನೆ ಶೇ 62.34 ರಷ್ಟು) ಹಾಗೂ ಪ್ರಾರಂಭಿಕ ಮತ್ತು ಸ್ವಾಧೀನಾನುಭವ ಪ್ರಮಾಣ ಪತ್ರಗಳನ್ನು ಈ ಕಟ್ಟಡಕ್ಕೆ ಪಡೆದಿರುವುದಿಲ್ಲವೆಂದು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

ಸದರಿ ಕಟ್ಟಡವನ್ನು ಮಂಜೂರಾತಿ ನಕ್ಷೆಯಂತೆ ನಿರ್ಮಾಣ ಮಾಡದೇ ಕಟ್ಟಡ ಉಪವಿಧಿಗಳ ಉಲ್ಲಂಘನೆ ಮಾಡಿರುವುದರಿಂದ, ಈ ಕಟ್ಟಡಕ್ಕೆ ವಿದ್ಯುತ್ ಸಂಪರ್ಕ ನೀಡದಂತೆ ಕ್ರಮ ವಹಿಸಲು ತಿಳಿಸಿದೆ.

Subhasha 22/9/08
ಅಧೀಕ್ಷಕ ಅಭಿಯಂತರರು
ತಾಂತ್ರಿಕ ಹಾಗೂ ಜಾಗೃತ ಕೋಶ

1. ಪ್ರತಿಯನ್ನು ಮಾನ್ಯ ಆಯುಕ್ತರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಪ್ರತಿಯನ್ನು ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ಗಾಂಧಿನಗರ) ರವರಿಗೆ ಕಳುಹಿಸಿದೆ.

MF

23/9/08
Executive Engineer (Ele.)
BESCOM West Division
Crescent Road, Madhava Nagar
Bangalore - 560 001

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆಃ ಅಅ/ಟಿ.ವಿ.ಸಿ.ಸಿ./ಜಿಎಲ್/133/1/08–09

ಅಧೀಕ್ಷಕ ಅಭಿಯಂತರರ ಕಛೇರಿ,
ತಾಂತ್ರಿಕ ಹಾಗೂ ಜಾಗೃತಾ ಕೋಶ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು. ದಿನಾಂಕಃ 22/09/2008.

ರವರಿಗೆ,
ಕಾರ್ಯನಿರ್ವಾಹಕ ಇಂಜಿನಿಯರ್ (ವಿ),
ವಾ, ಕಾ ಮತ್ತು ಪಾ, ಪಶ್ಚಿಮ ವಿಭಾಗ,
ಬೆ ವಿ ಕಂ, ಕ್ರೆಸೆಂಟ್ ರಸ್ತೆ, ಕ್ರೆಸೆಂಟ್ ಕಟ್ಟಡ,
ಬೆಂಗಳೂರು–01.

ವಿಷಯ: ವಾರ್ಡ್ ಸಂಖ್ಯೆ–27ರ ಗಾಂಧಿನಗರ, ಟಿ.ಸಿ.ಎಂ.ರಾಯನ್ ರಸ್ತೆ, 2ನೇ ಕ್ರಾಸ್‌ನ ಸ್ವತ್ತಿನ ಸಂಖ್ಯೆ–4ರಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ನೀಡುವ ಬಗ್ಗೆ.

ಉಲ್ಲೇಖ: ಕಾನಿಇ(ವಿ)ಪವಿ/ಸ.ಕಇಂ(ವಿ)ಸಇಂ(ವಿ)/08–09/3559 ದಿನಾಂಕ: 10/09/2008.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ಸ್ವತ್ತಿನ ಸಂಖ್ಯೆ–4 ರಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ಕಲ್ಪಿಸುವ ಸಲುವಾಗಿ ಲಗತ್ತಿಸಿರುವ ಜೆರಾಕ್ಸ್ ಪ್ರತಿಯ ನಕ್ಷೆಯನ್ನು ಪರಿಶೀಲಿಸಿ ಮಂಜೂರಾಗಿರುವ ಬಗ್ಗೆ ಮಾಹಿತಿ ನೀಡಲು ಕೋರಿರುತ್ತೀರಿ. ಉಲ್ಲೇಖಿತ ಪತ್ರವು ದಿನಾಂಕ: 10/09/2008 ರಂದು ಈ ಕಛೇರಿಯಲ್ಲಿ ಸ್ವೀಕೃತಗೊಂಡಿರುತ್ತದೆ.

ಸದರಿ ಸ್ವತ್ತಿನಲ್ಲಿನ ಕಟ್ಟಡವನ್ನು ದಿನಾಂಕ: 16/09/2008 ರಂದು ಈ ವಿಭಾಗದ ಕಾರ್ಯಪಾಲಕ ಇಂಜಿನಿಯರ್ (ಟಿ.ವಿ.ಸಿ.ಸಿ.–(ಪಶ್ಚಿಮ) ರವರು ಪರಿವೀಕ್ಷಿಸಿರುತ್ತಾರೆ. ಸದರಿ ಸ್ವತ್ತಿನಲ್ಲಿ ಲಾಡ್ಜಿಂಗ್ ಉಪಯೋಗಕ್ಕಾಗಿ ಸ್ಟಿಲ್ಟ್, ನೆಲ ಮತ್ತು ಎರಡು ಮೇಲು ಅಂತಸ್ತುಗಳ ಜೊತೆಗೆ ಟೆರೇಸ್ ಪ್ಲೋರ್ ಕಟ್ಟಡವನ್ನು ನಿರ್ಮಿಸಲು, ಪಾಲಿಕೆಯ ಜಂಟಿ ಆಯುಕ್ತರು (ಪಶ್ಚಿಮ) ರವರು (ಎಲ್‌ಪಿ ಸಂಖ್ಯೆ. 181/07–08) ದಿನಾಂಕ: 07/10/2007 ರಂದು ನಕ್ಷೆ ಮಂಜೂರಾತಿಯನ್ನು ನೀಡಿರುತ್ತಾರೆಂದು, ನಿರ್ಮಾಣ ಕಾರ್ಯವು ಪೂರ್ಣಗೊಳ್ಳುವ ಹಂತದಲ್ಲಿದ್ದು, ನಿರ್ಮಾಣವನ್ನು ಮಂಜೂರಾತಿ ನಕ್ಷೆಯೊಂದಿಗೆ ಹೋಲಿಸಿದಾಗ ನಡುಜಾಗಗಳನ್ನು ಕಡಿಮೆ ಬಿಟ್ಟಿರುವುದಾಗಿ(ಉಲ್ಲಂಘನೆ ಶೇ 75 ರಷ್ಟು) ಕಟ್ಟಡದ ಎತ್ತರವನ್ನು ಮಂಜೂರಾತಿ ನಕ್ಷೆಗಿಂತ ಹೆಚ್ಚು ವಿಸ್ತರಿಸಿರುವುದಾಗಿ ಮತ್ತು ಮೂರನೇಯ ಅಂತಸ್ತನ್ನು ಅನಧಿಕೃತವಾಗಿ ನಿರ್ಮಿಸಿರುತ್ತಾರೆಂದು ಹಾಗೂ ಪ್ರಾರಂಭಿಕ ಮತ್ತು ಸ್ವಾಧೀನಾನುಭವ ಪ್ರಮಾಣ ಪತ್ರಗಳನ್ನು ಈ ಕಟ್ಟಡಕ್ಕೆ ಪಡೆದಿರುವುದಿಲ್ಲವೆಂದು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

ಸದರಿ ಕಟ್ಟಡವನ್ನು ಮಂಜೂರಾತಿ ನಕ್ಷೆಯಂತೆ ನಿರ್ಮಾಣ ಮಾಡದೇ ಕಟ್ಟಡ ಉಪವಿಧಿಗಳ ಉಲ್ಲಂಘನೆ ಮಾಡಿರುವುದರಿಂದ, ಈ ಕಟ್ಟಡಕ್ಕೆ ವಿದ್ಯುತ್ ಸಂಪರ್ಕ ನೀಡದಂತೆ ಕ್ರಮ ವಹಿಸಲು ತಿಳಿಸಿದೆ.

22/9/08
ಅಧೀಕ್ಷಕ ಅಭಿಯಂತರರು
ತಾಂತ್ರಿಕ ಹಾಗೂ ಜಾಗೃತ ಕೋಶ

Executive Engineer (Ele.)
BESCOM West Division
Crescent Road, Madhava Nagar
Bangalore - 560 001

1. ಪ್ರತಿಯನ್ನು ಮಾನ್ಯ ಆಯುಕ್ತರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಪ್ರತಿಯನ್ನು ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ಗಾಂಧಿನಗರ) ರವರಿಗೆ ಕಳುಹಿಸುತ್ತಾ ಸದರಿ ಕಟ್ಟಡದಲ್ಲಿನ ಅನಧಿಕೃತ ನಿರ್ಮಾಣ/ಕಟ್ಟಡದ ಉಪವಿಧಿಗಳಿಗೆ ವ್ಯತಿರಿಕ್ತವಾಗಿ ನಿರ್ಮಿಸಿರುವ ಭಾಗಗಳನ್ನು ತೆರವುಗೊಳಿಸಲು ಕೆ.ಎಂ.ಸಿ. ಕಾಯ್ದೆ 1976 ಅನ್ವಯ ತೆಗೆದುಕೊಂಡ ಕ್ರಮಗಳ ಬಗೆಗಿನ ದಾಖಲೆಗಳನ್ನು ವಿವರವಾದ ವರದಿಯೊಂದಿಗೆ ಸಲ್ಲಿಸಲು ಸೂಚಿಸಿದೆ.

MF

18

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆಃ ಅಅ/ಟಿ.ವಿ.ಸಿ.ಸಿ./ಜಿಎಲ್/132/2/08–09 (135/2)

ಅಧೀಕ್ಷಕ ಅಭಿಯಂತರರ ಕಛೇರಿ,
ತಾಂತ್ರಿಕ ಹಾಗೂ ಜಾಗೃತಾ ಕೋಶ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು. ದಿನಾಂಕಃ 22/09/2008.

ರವರಿಗೆ,
ಕಾರ್ಯನಿರ್ವಾಹಕ ಇಂಜಿನಿಯರ್ (ವಿ),
ವಾ, ಕಾ ಮತ್ತು ಪಾ, ಪಶ್ಚಿಮ ವಿಭಾಗ,
ಬಿ ವಿ ಕಂ, ಕ್ರೆಸೆಂಟ್ ರಸ್ತೆ, ಕ್ರೆಸೆಂಟ್ ಕಟ್ಟಡ,
ಬೆಂಗಳೂರು–01.

ವಿಷಯ: ವಾರ್ಡ್ ಸಂಖ್ಯೆ–29ರ ಸುಬ್ಬಣ್ಣ ಚಾರ್ಟ್‌ಲೇನ್ ನಂ.1, 1ನೇ ಕ್ರಾಸ್‌ನ ಸ್ವತ್ತಿನ ಸಂಖ್ಯೆ–10 ರಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ನೀಡುವ ಬಗ್ಗೆ.

ಉಲ್ಲೇಖ: ಕಾನಿಇ/ಪವಿ/ಸ.ಇಂ/08–09/3559 ದಿನಾಂಕ: 10/09/2008.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ಸ್ವತ್ತಿನ ಸಂಖ್ಯೆ–10 ರಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ಕಲ್ಪಿಸುವ ಸಲುವಾಗಿ ಲಗತ್ತಿಸಿರುವ ಜೆರಾಕ್ಸ್ ಪ್ರತಿಯ ನಕ್ಷೆಯನ್ನು ಪರಿಶೀಲಿಸಿ ಮಂಜೂರಾಗಿರುವ ಬಗ್ಗೆ ಮಾಹಿತಿ ನೀಡಲು ಕೋರಿರುತ್ತೀರಿ. ಉಲ್ಲೇಖಿತ ಪತ್ರವು ದಿನಾಂಕ: 10/09/2008 ರಂದು ಈ ಕಛೇರಿಯಲ್ಲಿ ಸ್ವೀಕೃತಗೊಂಡಿರುತ್ತದೆ.

ಸದರಿ ಸ್ವತ್ತಿನಲ್ಲಿನ ಕಟ್ಟಡವನ್ನು ದಿನಾಂಕ: 18/09/2008 ರಂದು ಈ ವಿಭಾಗದ ಕಾರ್ಯಪಾಲಕ ಇಂಜಿನಿಯರ್ (ಟಿ.ವಿ.ಸಿ.ಸಿ.–(ಪಶ್ಚಿಮ) ರವರು ಪರಿವೀಕ್ಷಿಸಿರುತ್ತಾರೆ. ಸದರಿ ಸ್ವತ್ತಿನಲ್ಲಿ ವಸತಿ ಉಪಯೋಗಕ್ಕಾಗಿ ನೆಲ ಮತ್ತು ಎರಡು ಮೇಲು ಅಂತಸ್ತುಳ್ಳ ಕಟ್ಟಡ ನಿರ್ಮಿಸಲು, ಪಾಲಿಕೆಯ ಜಂಟಿ ಆಯುಕ್ತರು (ಪಶ್ಚಿಮ) ರವರು (ಎಲ್‌ಪಿ ಸಂಖ್ಯೆ. 389/08–09) ದಿನಾಂಕ: 29/05/2008 ರಂದು ನಕ್ಷೆ ಮಂಜೂರಾತಿಯನ್ನು ನೀಡಿರುತ್ತಾರೆಂದು, ನಿರ್ಮಾಣ ಕಾರ್ಯವು ಪ್ರಗತಿಯಲ್ಲಿರುತ್ತದೆಂದು, ನಿರ್ಮಾಣವನ್ನು ಮಂಜೂರಾತಿ ನಕ್ಷೆಯೊಂದಿಗೆ ಹೋಲಿಸಿದಾಗ ನಡುಜಾಗಗಳನ್ನು ಬಿಟ್ಟಿರುವುದಿಲ್ಲವೆಂದು, (ಉಲ್ಲಂಘನೆ ಶೇ 100 ರಷ್ಟು) ಹಾಗೂ ಪ್ರಾರಂಭಿಕ ಮತ್ತು ಸ್ವಾಧೀನಾನುಭವ ಪ್ರಮಾಣ ಪತ್ರಗಳನ್ನು ಈ ಕಟ್ಟಡಕ್ಕೆ ಪಡೆದಿರುವುದಿಲ್ಲವೆಂದು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

ಸದರಿ ಕಟ್ಟಡವನ್ನು ಮಂಜೂರಾತಿ ನಕ್ಷೆಯಂತೆ ನಿರ್ಮಾಣ ಮಾಡದೇ ಕಟ್ಟಡ ಉಪವಿಧಿಗಳ ಉಲ್ಲಂಘನೆ ಮಾಡಿರುವುದರಿಂದ, ಈ ಕಟ್ಟಡಕ್ಕೆ ವಿದ್ಯುತ್ ಸಂಪರ್ಕ ನೀಡದಂತೆ ಕ್ರಮ ವಹಿಸಲು ತಿಳಿಸಿದೆ.

22/9/08
ಅಧೀಕ್ಷಕ ಅಭಿಯಂತರರು
ತಾಂತ್ರಿಕ ಹಾಗೂ ಜಾಗೃತ ಕೋಶ

1. ಪ್ರತಿಯನ್ನು ಮಾನ್ಯ ಆಯುಕ್ತರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಪ್ರತಿಯನ್ನು ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ಬಿನ್ನಿಪೇಟೆ) ರವರಿಗೆ ಕಳುಹಿಸಿದೆ.

MF

23/9/08
Executive Engineer (Ele.)
BESCOM West Division
Crescent Road, Madhava Nagar
Bangalore - 560 001

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆಃ ಅಅ/ಟಿ.ವಿ.ಸಿ.ಸಿ./ಜಿಎಲ್/123/08–09

ಅಧೀಕ್ಷಕ ಅಭಿಯಂತರರ ಕಛೇರಿ,
ತಾಂತ್ರಿಕ ಹಾಗೂ ಜಾಗೃತಾ ಕೋಶ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು. ದಿನಾಂಕಃ 22/09/2008.

ರವರಿಗೆ,
ಕಾರ್ಯನಿರ್ವಾಹಕ ಇಂಜಿನಿಯರ್ (ವಿ),
ಅಧಿಕ ಕೇಂದ್ರ ವಿಭಾಗ, ಬೆಸ್ಕಾಂ,
ಯು.ಎ.ಎಸ್. ಕ್ಯಾಂಪಸ್, ಹೆಬ್ಬಾಳ,
ಬೆಂಗಳೂರು–24.

ವಿಷಯ: ವಾರ್ಡ್ ಸಂಖ್ಯೆ–100ರ ಎನ್.ಎಸ್.ಹಳ್ಳಿ, ಎನ್.ಜಿ.ಎಫ್‌ಲೇಔಟ್‌ನ ಸ್ವತ್ತಿನ ಸಂಖ್ಯೆ–135 ರಲ್ಲಿನ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ನೀಡುವ ಬಗ್ಗೆ.

ಉಲ್ಲೇಖ: No. EEE/ACD/AEE(O)/2008-09- 4692 ದಿನಾಂಕ: 06/09/2008.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ಸ್ವತ್ತಿನ ಸಂಖ್ಯೆ–135ರಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ಕಲ್ಪಿಸುವ ಸಲುವಾಗಿ ಕಟ್ಟಡ ಸುರಕ್ಷತಾ ಪ್ರಮಾಣ ಪತ್ರ ನೀಡಲು ಕೋರಿರುತ್ತೀರಿ. ಉಲ್ಲೇಖಿತ ಪತ್ರವು ದಿನಾಂಕ: 10/09/2008 ರಂದು ಈ ಕಛೇರಿಯಲ್ಲಿ ಸ್ವೀಕೃತಗೊಂಡಿರುತ್ತದೆ.

ಸದರಿ ಸ್ವತ್ತಿನಲ್ಲಿನ ಕಟ್ಟಡವನ್ನು ದಿನಾಂಕ: 16/09/2008 ರಂದು ಈ ವಿಭಾಗದ ಕಾರ್ಯಪಾಲಕ ಇಂಜಿನಿಯರ್ (ಟಿ.ವಿ.ಸಿ.ಸಿ.–ಪಶ್ಚಿಮ) ರವರು ಪರಿವೀಕ್ಷಿಸಿರುತ್ತಾರೆ. ಸದರಿ ಸ್ವತ್ತಿನಲ್ಲಿ ವಸತಿ ಅಪಾರ್ಟ್‌ಮೆಂಟ್ ಉಪಯೋಗಕ್ಕಾಗಿ ಸ್ಟಿಲ್ಟ್, ನೆಲ ಮತ್ತು ಎರಡು ಮೇಲು ಅಂತಸ್ತುಗಳ ಜೊತೆಗೆ ಟೆರೇಸ್ ಫ್ಲೋರ್ ಕಟ್ಟಡವನ್ನು ನಿರ್ಮಿಸಲು, ಪಾಲಿಕೆಯ ಜಂಟಿ ಆಯುಕ್ತರು (ಪಶ್ಚಿಮ) ರವರು (ಎಲ್‌ಪಿ ಸಂಖ್ಯೆ. 776/07–08) ದಿನಾಂಕ: 21/07/2007 ರಂದು ನಕ್ಷೆ ಮಂಜೂರಾತಿಯನ್ನು ನೀಡಿರುತ್ತಾರೆಂದು ಕಟ್ಟಡವು ಪೂರ್ಣಗೊಳ್ಳುವ ಹಂತದಲ್ಲಿದ್ದು, ನಿರ್ಮಾಣವನ್ನು ಮಂಜೂರಾತಿ ನಕ್ಷೆಯೊಂದಿಗೆ ಹೋಲಿಸಿದಾಗ ನಡುಜಾಗಗಳನ್ನು ಕಡಿಮೆ ಬಿಟ್ಟಿದ್ದು (ಉಲ್ಲಂಘನೆ ಸರಾಸರಿ ಶೇ 35.41% ರಷ್ಟು) ಟೆರೇಸ್ ಫ್ಲೋರ್‌ನಲ್ಲಿನ ಭಾಗಶಃ ಭಾಗವನ್ನು ಉಪಯೋಗಿಸಿ ಮಂಗಳೂರು ಹೆಂಚಿನ ಮೇಲ್ಛಾವಣಿವುಳ್ಳ ಕಟ್ಟಡವನ್ನು ಅನಧಿಕೃತವಾಗಿ ನಿರ್ಮಾಣ ಮಾಡಿರುವುದಾಗಿ ಪ್ರಾರಂಭಿಕ ಮತ್ತು ಸ್ವಾಧೀನಾನುಭವ ಪ್ರಮಾಣ ಪತ್ರಗಳನ್ನು ಈ ಕಟ್ಟಡಕ್ಕೆ ಪಡೆದಿರುವುದಿಲ್ಲವೆಂದು ವರದಿ ಮಾಡಿರುತ್ತಾರೆ.

ಸದರಿ ಕಟ್ಟಡವನ್ನು ಮಂಜೂರಾತಿ ನಕ್ಷೆಯಂತೆ ನಿರ್ಮಾಣ ಮಾಡದೇ ಕಟ್ಟಡ ಉಪವಿಧಿಗಳ ಉಲ್ಲಂಘನೆ ಮಾಡಿರುವುದರಿಂದ, ಈ ಕಟ್ಟಡಕ್ಕೆ ವಿದ್ಯುತ್ ಸಂಪರ್ಕ ನೀಡದಂತೆ ಕ್ರಮ ವಹಿಸಲು ತಿಳಿಸಿದೆ.

22/9/08
ಅಧೀಕ್ಷಕ ಅಭಿಯಂತರರು
ತಾಂತ್ರಿಕ ಹಾಗೂ ಜಾಗೃತ ಕೋಶ

Executive Engineer ★ Bangalore-24 ★
From No. 3249
Dt: No. 23/9/08
Addl Central Dn. BESCOM

1) ಪ್ರತಿಯನ್ನು ಮಾನ್ಯ ಆಯುಕ್ತರು ರವರ ಅವಗಾಹನೆಗಾಗಿ ಸಲ್ಲಿಸಿದೆ.

2) ಪ್ರತಿಯನ್ನು ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ಸಂಜಯನಗರ) ರವರಿಗೆ ಕಳುಹಿಸುತ್ತಾ ಸದರಿ ಕಟ್ಟಡದಲ್ಲಿನ ಅನಧಿಕೃತ ನಿರ್ಮಾಣ/ಕಟ್ಟಡದ ಉಪವಿಧಿಗಳಿಗೆ ವ್ಯತಿರಿಕ್ತವಾಗಿ ನಿರ್ಮಿಸಿರುವ ಭಾಗಗಳನ್ನು ತೆರವುಗೊಳಿಸಲು ಕೆ.ಎಂ.ಸಿ. ಕಾಯ್ದೆ 1976 ಅನ್ವಯ ತೆಗೆದುಕೊಂಡ ಕ್ರಮಗಳ ಬಗೆಗಿನ ದಾಖಲೆಗಳನ್ನು ವಿವರವಾದ ವರದಿಯೊಂದಿಗೆ ಸಲ್ಲಿಸಲು ಸೂಚಿಸಿದೆ

MF

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆಃ ಅಅ/ಟಿ.ವಿ.ಸಿ.ಸಿ./ಜಿಐಎಲ್/132/08–09

ಅಧೀಕ್ಷಕ ಅಭಿಯಂತರರ ಕಛೇರಿ,
ತಾಂತ್ರಿಕ ಹಾಗೂ ಜಾಗೃತಾ ಕೋಶ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು. ದಿನಾಂಕಃ 23/09/2008.

ರವರಿಗೆ,
ಕಾರ್ಯನಿರ್ವಾಹಕ ಇಂಜಿನಿಯರ್ (ವಿ),
ವಾ, ಕಾ ಮತ್ತು ಪಾ, ಪಶ್ಚಿಮ ವಿಭಾಗ,
ಬಿ ವಿ ಕಂ, ಕ್ರೆಸೆಂಟ್ ರಸ್ತೆ, ಕ್ರೆಸೆಂಟ್ ಕಟ್ಟಡ,
ಬೆಂಗಳೂರು–01.

ವಿಷಯ: ವಾರ್ಡ್ ಸಂಖ್ಯೆ–28ರ ಕಿಲಾರಿ ರಸ್ತೆ, 32ನೇ ಕ್ರಾಸ್‌ನ ಸ್ವತ್ತಿನ ಸಂಖ್ಯೆ–4:1ರಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ನೀಡುವ ಬಗ್ಗೆ.

ಉಲ್ಲೇಖ: ಕಾನಿಇ/ಪವಿ/ಸ.ಇಂ/08–09/3558 ದಿನಾಂಕ: 10/09/2008.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ಸ್ವತ್ತಿನ ಸಂಖ್ಯೆ–4:1 ರಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ಕಲ್ಪಿಸುವ ಸಲುವಾಗಿ ಸುರಕ್ಷತಾ ಪ್ರಮಾಣ ಪತ್ರ ನೀಡಲು ಕೋರಿರುತ್ತೀರಿ. ಉಲ್ಲೇಖಿತ ಪತ್ರವು ದಿನಾಂಕ: 10/09/2008 ರಂದು ಈ ಕಛೇರಿಯಲ್ಲಿ ಸ್ವೀಕೃತಗೊಂಡಿರುತ್ತದೆ.

ಸದರಿ ಸ್ವತ್ತಿನಲ್ಲಿನ ಕಟ್ಟಡವನ್ನು ದಿನಾಂಕ: 18/09/2008 ರಂದು ಈ ವಿಭಾಗದ ಕಾರ್ಯಪಾಲಕ ಇಂಜಿನಿಯರ್ (ಟಿ.ವಿ.ಸಿ.ಸಿ.–(ಪಶ್ಚಿಮ) ರವರು ಪರಿವೀಕ್ಷಿಸಿರುತ್ತಾರೆ. ಸದರಿ ಸ್ವತ್ತಿನಲ್ಲಿ ವಸತಿ ಉಪಯೋಗಕ್ಕಾಗಿ ನೆಲ ಮತ್ತು ಮೊದಲನೇಯ ಅಂತಸ್ತಿನ ಕಟ್ಟಡವನ್ನು ನಿರ್ಮಿಸಲು, ಪಾಲಿಕೆಯ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ಚಿಕ್ಕಪೇಟೆ) ರವರು (ಎಲ್‌ಪಿ ಸಂಖ್ಯೆ. 147/02–03) ದಿನಾಂಕ: 28/12/2002 ರಂದು ನಕ್ಷೆ ಮಂಜೂರಾತಿಯನ್ನು ನೀಡಿರುವುದು ಲಗತ್ತಿಸಿರುವ ನಕ್ಷೆ ಪ್ರತಿಯಿಂದ ತಿಳಿದು ಬಂದಿರುವುದಾಗಿ, ನಿರ್ಮಾಣ ಕಾರ್ಯವು ಪೂರ್ಣಗೊಂಡಿರುತ್ತದೆಂದು, ನಿರ್ಮಾಣವನ್ನು ಮಂಜೂರಾತಿ ನಕ್ಷೆಯೊಂದಿಗೆ ಹೋಲಿಸಿದಾಗ ನಡುಜಾಗಗಳನ್ನು ಬಿಟ್ಟಿರುವುದಿಲ್ಲವೆಂದು, (ಉಲ್ಲಂಘನೆ ಶೇ 100 ರಷ್ಟು) ಕಟ್ಟಡದ ಎತ್ತರವನ್ನು ಮಂಜೂರಾತಿ ನಕ್ಷೆಗಿಂತ ಹೆಚ್ಚಾಗಿ ವಿಸ್ತರಿಸಿರುವುದಾಗಿ ನೆಲ ಅಂತಸ್ತನ್ನು ಅನಧಿಕೃತವಾಗಿ ವಾಣಿಜ್ಯ ಚಟುವಟಿಕೆಗಳಿಗೆ ಉಪಯೋಗಿಸುತ್ತಿರುವುದನ್ನು ಮತ್ತು mazanine floor, ಎರಡನೇಯ ಮತ್ತು ಮೂರನೇಯ ಅಂತಸ್ತನ್ನು ಅನಧಿಕೃತವಾಗಿ ನಿರ್ಮಿಸಿರುತ್ತಾರೆಂದು ಹಾಗೂ ಪ್ರಾರಂಭಿಕ ಮತ್ತು ಸ್ವಾಧೀನಾನುಭವ ಪ್ರಮಾಣ ಪತ್ರಗಳನ್ನು ಈ ಕಟ್ಟಡಕ್ಕೆ ಪಡೆದಿರುವುದಿಲ್ಲವೆಂದು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

ಸದರಿ ಕಟ್ಟಡವನ್ನು ಮಂಜೂರಾತಿ ನಕ್ಷೆಯಂತೆ ನಿರ್ಮಾಣ ಮಾಡದೇ ಕಟ್ಟಡ ಉಪವಿಧಿಗಳ ಉಲ್ಲಂಘನೆ ಮಾಡಿರುವುದರಿಂದ, ಈ ಕಟ್ಟಡಕ್ಕೆ ವಿದ್ಯುತ್ ಸಂಪರ್ಕ ನೀಡದಂತೆ ಕ್ರಮ ವಹಿಸಲು ತಿಳಿಸಿದೆ.

S Prabhakar 23/9/08
ಅಧೀಕ್ಷಕ ಅಭಿಯಂತರರು
ತಾಂತ್ರಿಕ ಹಾಗೂ ಜಾಗೃತ ಕೋಶ

1. ಪ್ರತಿಯನ್ನು ಮಾನ್ಯ ಆಯುಕ್ತರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಪ್ರತಿಯನ್ನು ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ಚಿಕ್ಕಪೇಟೆ) ರವರಿಗೆ ಕಳುಹಿಸುತ್ತಾ ಸದರಿ ಕಟ್ಟಡದಲ್ಲಿನ ಅನಧಿಕೃತ ನಿರ್ಮಾಣ/ಕಟ್ಟಡದ ಉಪವಿಧಿಗಳಿಗೆ ವ್ಯತಿರಿಕ್ತವಾಗಿ ನಿರ್ಮಿಸಿರುವ ಭಾಗಗಳನ್ನು ತೆರವುಗೊಳಿಸಲು ಕೆ.ಎಂ.ಸಿ. ಕಾಯ್ದೆ 1976 ಅನ್ವಯ ತೆಗೆದುಕೊಂಡ ಕ್ರಮಗಳ ಬಗೆಗಿನ ದಾಖಲೆಗಳನ್ನು ವಿವರವಾದ ವರದಿಯೊಂದಿಗೆ ಸಲ್ಲಿಸಲು ಸೂಚಿಸಿದೆ.

WEST DIVISION
E.E. (Ele)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆಃ ಅಅ/ಟಿ.ವಿ.ಸಿ.ಸಿ./ಜಿಇಎಲ್/133/08–09

ಅಧೀಕ್ಷಕ ಅಭಿಯಂತರರ ಕಛೇರಿ,
ತಾಂತ್ರಿಕ ಹಾಗೂ ಜಾಗೃತಾ ಕೋಶ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು. ದಿನಾಂಕಃ 23/09/2008.

ರವರಿಗೆ,
ಕಾರ್ಯನಿರ್ವಾಹಕ ಇಂಜಿನಿಯರ್ (ವಿ),
ವಾ, ಕಾ ಮತ್ತು ಪಾ, ಪಶ್ಚಿಮ ವಿಭಾಗ,
ಬಿ ವಿ ಕಂ, ಕ್ರೆಸೆಂಟ್ ರಸ್ತೆ, ಕ್ರೆಸೆಂಟ್ ಕಟ್ಟಡ,
ಬೆಂಗಳೂರು–01.

ವಿಷಯ: ವಾರ್ಡ್ ಸಂಖ್ಯೆ–28ರ ಒ.ಟಿ.ಸಿ. ರಸ್ತೆ, 1ನೇ 'ಎ' ಕ್ರಾಸ್, ಸ್ವತ್ತಿನ ಸಂಖ್ಯೆ–13/1ರಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ನೀಡುವ ಬಗ್ಗೆ.

ಉಲ್ಲೇಖ: ಸಂಖ್ಯೆ: ಕಾನಿಇ(ವಿ)ಪವಿ/ಸ.ಕ.ಇ(ವಿ)/ಸ.ಇಂ(ವಿ)/08–09/3559
ದಿನಾಂಕ: 10/09/2008.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ಸ್ವತ್ತಿನ ಸಂಖ್ಯೆ–13/1 ರಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ಕಲ್ಪಿಸುವ ಸಲುವಾಗಿ ಕಟ್ಟಡ ಸುರಕ್ಷತಾ ಪ್ರಮಾಣ ಪತ್ರ ನೀಡಲು ಕೋರಿರುತ್ತೀರಿ. ಉಲ್ಲೇಖಿತ ಪತ್ರವು ದಿನಾಂಕ: 10/09/2008 ರಂದು ಈ ಕಛೇರಿಯಲ್ಲಿ ಸ್ವೀಕೃತಗೊಂಡಿರುತ್ತದೆ.

ಸದರಿ ಸ್ವತ್ತನ್ನು ದಿನಾಂಕ: 18/09/2008 ರಂದು ಈ ವಿಭಾಗದ ಕಾರ್ಯಪಾಲಕ ಇಂಜಿನಿಯರ್ (ಟಿ.ವಿ.ಸಿ.ಸಿ.ಪಶ್ಚಿಮ) ರವರು ಹಾಗೂ ಸಹಾಯಕ ಅಭಿಯಂತರರು (ಚಿಕ್ಕಪೇಟೆ) ರವರೊಂದಿಗೆ ತಲಾಶು ಮಾಡಲಾಗಿ, ಸದರಿ ಸ್ವತ್ತಿನ ವಿಳಾಸ ದೊರಕಿರುವುದಿಲ್ಲವೆಂದು ವರದಿ ಮಾಡಿರುತ್ತಾರೆ.

ಮಂಜೂರಾತಿ ನಕ್ಷೆಯಲ್ಲಿ ನಮೂದಿಸಿರುವ ವಿಳಾಸದಲ್ಲಿನ ಕಟ್ಟಡವನ್ನು ತೋರಿಸಿದ್ದಲ್ಲಿ ಪರಿಶೀಲಿಸಿ ವರದಿಯನ್ನು ನೀಡಲಾಗುವುದೆಂದು ತಿಳಿಸಿದೆ.

23/9/08
ಅಧೀಕ್ಷಕ ಅಭಿಯಂತರರು
ತಾಂತ್ರಿಕ ಹಾಗೂ ಜಾಗೃತ ಕೋಶ

1. ಪ್ರತಿಯನ್ನು ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಿದೆ.
2. ಪ್ರತಿಯನ್ನು ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ಚಿಕ್ಕಪೇಟೆ) ರವರಿಗೆ ಕಳುಹಿಸಿದೆ.

MF

WEST DIVISION
BESCOM
No.....
Date.....
A.E.E. (Ele)
A.O. (F & C)
A.O. (I/A)
E.E. (Ele)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆಃ ಅಅ/ಟಿ.ವಿ.ಸಿ.ಸಿ./ಜಿಎಲ್/163/08–09

ಅಧೀಕ್ಷಕ ಅಭಿಯಂತರರ ಕಛೇರಿ,
ತಾಂತ್ರಿಕ ಹಾಗೂ ಜಾಗೃತಾ ಕೋಶ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು. ದಿನಾಂಕಃ 25/09/2008.

ರವರಿಗೆ,
ಕಾರ್ಯನಿರ್ವಾಹಕ ಇಂಜಿನಿಯರ್ (ವಿ),
(ವಾ. ಕಾ ಮತ್ತು ಪ) ರವರ ಕಛೇರಿ,
ದಕ್ಷಿಣ ವಿಭಾಗ, ಬನಶಂಕರಿ 2ನೇ ಹಂತ,
ಬೆಂಗಳೂರು–70.

ವಿಷಯ: ವಾರ್ಡ್ ಸಂಖ್ಯೆ–48ರ ಸುಧಾಮನಗರ, 1ನೇ 'ಸಿ' ಕ್ರಾಸ್, ಸ್ವತ್ತಿನ ಸಂಖ್ಯೆ–12 ರಲ್ಲಿನ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ನೀಡುವ ಬಗ್ಗೆ.

ಉಲ್ಲೇಖ: ಸಂ: ಕಾನಿಇಂ(ವಿ)/ದವಿ/7251 ದಿನಾಂಕ: 12/09/2008.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ಸ್ವತ್ತಿನ ಸಂಖ್ಯೆ–12 ರಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ಕಲ್ಪಿಸುವ ಸಲುವಾಗಿ ಸಲ್ಲಿಸಿರುವ ನೀಲಿ ನಕ್ಷೆಯ ಮಂಜೂರಾತಿಯ ಬಗ್ಗೆ ಪರಿಶೀಲಿಸಿ ಧೃಡೀಕರಿಸಬೇಕಾಗಿ ಕೋರಿರುತ್ತೀರಿ. ಉಲ್ಲೇಖಿತ ಪತ್ರವು ದಿನಾಂಕ: 17/09/2008 ರಂದು ಈ ಕಛೇರಿಯಲ್ಲಿ ಸ್ವೀಕೃತಗೊಂಡಿರುತ್ತದೆ.

ಸದರಿ ಸ್ವತ್ತಿನಲ್ಲಿನ ಕಟ್ಟಡವನ್ನು ದಿನಾಂಕ: 23/09/2008 ರಂದು ಈ ವಿಭಾಗದ ಕಾರ್ಯಪಾಲಕ ಇಂಜಿನಿಯರ್ (ಟಿ.ವಿ.ಸಿ.ಸಿ.–(ಪಶ್ಚಿಮ) ರವರು ಪರಿವೀಕ್ಷಿಸಿರುತ್ತಾರೆ. ಸದರಿ ಸ್ವತ್ತಿನಲ್ಲಿ ವಸತಿ ಅಪಾರ್ಟ್‌ಮೆಂಟ್ ಉಪಯೋಗಕ್ಕಾಗಿ ಸ್ಟಿಲ್ಟ್, ನೆಲ ಮತ್ತು ಎರಡು ಮೇಲು ಅಂತಸ್ತುಗಳ ಜೊತೆಗೆ ಟೆರೇಸ್ ಪ್ಲೋರ್ ಕಟ್ಟಡವನ್ನು ನಿರ್ಮಿಸಲು, ಪಾಲಿಕೆಯ ಜಂಟಿ ಆಯುಕ್ತರು (ಪಶ್ಚಿಮ) ರವರು (ಎಲ್‌ಪಿ ಸಂಖ್ಯೆ. 1063/07–08) ದಿನಾಂಕ: 04/09/2007 ರಂದು ನಕ್ಷೆ ಮಂಜೂರಾತಿಯನ್ನು ನೀಡಿರುತ್ತಾರೆಂದು, ನಿರ್ಮಾಣ ಕಾರ್ಯವು ಪೂರ್ಣಗೊಳ್ಳುವ ಹಂತದಲ್ಲಿದ್ದು, ನಿರ್ಮಾಣವನ್ನು ಮಂಜೂರಾತಿ ನಕ್ಷೆಯೊಂದಿಗೆ ಹೋಲಿಸಿದಾಗ ನಡುಜಾಗಗಳನ್ನು ಕಡಿಮೆ ಬಿಟ್ಟಿರುವುದಾಗಿ (ಉಲ್ಲಂಘನೆ ಸರಾಸರಿ ಶೇ 59.99 ರಷ್ಟು) ಕಟ್ಟಡವನ್ನು ವಸತಿ ಉಪಯೋಗಕ್ಕಾಗಿ ನಿರ್ಮಾಣ ಮಾಡದೇ ವಾಣಿಜ್ಯ ಉಪಯೋಗಕ್ಕಾಗಿ ನಿರ್ಮಾಣ ಮಾಡುತ್ತಿರುತ್ತಾರೆಂದು ಹಾಗೂ ಪ್ರಾರಂಭಿಕ ಮತ್ತು ಸ್ವಾಧೀನಾನುಭವ ಪ್ರಮಾಣ ಪತ್ರಗಳನ್ನು ಈ ಕಟ್ಟಡಕ್ಕೆ ಪಡೆದಿರುವುದಿಲ್ಲವೆಂದು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

